ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ ಪ್ರಕರಣ 13 ರ ಅವಕಾಶದಡಿ ಅಧಿಸೂಚನೆ ಸಂಖ್ಯೆ ಯುಡಿಡಿ 04 ಎಂಎಲ್ಅರ್ 2014 ದಿನಾಂಕ: 15.02.2014 ರನ್ವಯ ರಾಜ್ಯ ಸರ್ಕಾರವು ಜಿಲ್ಲಾಧಿಕಾರಿಗಳಿಗೆ ಪ್ರತ್ಯಾಯೋಜಿಸಿದ ಅಧಿಕಾರದಂತೆ ಶಿವಮೊಗ್ಗ ಜಿಲ್ಲೆಯ ಸೊರಬ ಪುರಸಭೆಯ ವಾರ್ಡ್ ವಿಂಗಡಣೆಯ ಸಂಬಂಧ ಕರಡು ಅಧಿಸೂಚನೆಯನ್ನು ಕರ್ನಾಟಕ ರಾಜ್ಯ ಪತ್ರ (ವಿಶೇಷ ಪತ್ರಿಕೆ) ಭಾಗ III ರಲ್ಲಿ ದಿನಾಂಕ: 27.12.2021 ಈ ಮೂಲಕ ಪ್ರಚುರಪಡಿಸಿ ಬಾಧಿತರಾಗಬಹುದಾದ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿತ್ತು. ನಿಗಧಿತ ಅವಧಿಯಲ್ಲಿ ಬಂದ ಆಕ್ಷೇಪಣೆ /ಸಲಹೆಗಳನ್ನು ಪರಿಶೀಲಿಸಿ, ದಿನಾಂಕ:17.2.2022 ರಂದು ಅಂತಿಮಗೊಳಿಸಿದೆ.

ಪ್ರಸ್ತುತ ಸರ್ಕಾರವು ಕಾಯ್ದೆಯಡಿ ಜಿಲ್ಲಾಧಿಕಾರಿಯಾದ ನನಗೆ ಪ್ರತ್ಯಾಯೋಜಿಸಿದ ಅಧಿಕಾರದ ಮೇರೆಗೆ ಸೊರಬ ಪುರಸಭೆಯ ವಾರ್ಡ್ಗಳನ್ನು ಈ ಕೆಳಕಂಡಂತೆ ಅಂತಿಮವಾಗಿ ನಿಗಧಿಪಡಿಸಿ ಅಧಿಸೂಚಿಸಿದೆ.

1. ಸೊರಬ ಪುರಸಭೆಯನ್ನು 2011 ರ ಜನಗಣತಿಯ ಆಧಾರದ ಮೇಲೆ 23 (ಇಪ್ಪತ್ತಮೂರು) ಏಕ ಸದಸ್ಯ ವಾರ್ಡ್ಗಳನ್ನಾಗಿ ನಿಗಧಿಪಡಿಸಿದೆ.

2. ಲಗತ್ತಿಸಿದ ಅನುಬಂಧದ 2ನೇ ಕಾಲಂನಲ್ಲಿ ವಾರ್ಡಿನ ಸಂಖ್ಯೆ ಮತ್ತು ಹೆಸರನ್ನು 3ನೇ ಕಾಲಂನಲ್ಲಿ ಸಂಬಂಧಿಸಿದ ವಾರ್ಡಿನ ಚಕ್ಕುಬಂದಿ ಮತ್ತು ವ್ಯಾಪ್ತಿಗೆ ಒಳಪಟ್ಟಿರುವ ಪ್ರದೇಶಗಳನ್ನೂ ಬೌಂಡರಿಯನ್ನು ತೋರಿಸಿದೆ.

(ಡಾ॥ ಸೆಲ್ವಮಣಿ.ಆರ್)
ಜಿಲ್ಲಾಧಿಕಾರಿ,
ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.

OFFICE OF THE DEPUTY COMMISSIONER,

SHIMOGA DISTRICT, SHIMOGA.

No. SMGDC.DUDC/CSS2/247/2020-SMGDC_DUDC-SHIDC (54800/19-20) Date: 03.03.2022

FINAL NOTIFICATION

In exercise of the power under section 13 of Karnataka Municipalities Act 1964, delegated by the State Government to the Deputy Commissioner vide Government Notification No. UDD 4 MLR 2014 dated: 15.02.2014, Deputy Commissioner of Shivamogga draft notification has published Karnataka Gazette dated: 27.12.2021 (special issue) Part III in respect of Delimitation of Wards of Soraba Town Municipal Council calling for objection / suggestion. Objections/ suggestions have been received with in the stipulated time, verified and cleared on dated 17.02.2022.

Now, in exercise of powers delegated to me under section of the said Act I Deputy Commissioner of Shivamogga finaly conformed and notified the wards of the Soraba Town Municipal Council as follows:-

1. The number of territorial wards into which the Town Municipal Council Soraba is proposed to be divided based on 2011 population census, will be 23 (Twenty three) single member territorial wards.

2. The name and number of the ward is indicated in column 2 of the enclosed Annexure and the area covered and boundaries of each ward are indicated in column 3.

(Dr|| Selvamani.R)
Deputy Commissioner,
Shivamogga District,
SHIVAMOGGA

ಕೋಷ್ಟಕ–				
2011ರ ಜನಗಣತಿಯಂತೆ ಸೊರಬ ಪುರಸಭೆ ವಾರ್ಡ್ ಗಳ ಪುನರ್ ವಿಂಗಡಣೆಯ ಸರಹದ್ದು				
ಕ್ರ.ಸಂ	**ವಾರ್ಡ್ ನ ಹೆಸರು ಮತ್ತು ಸಂಖ್ಯೆ**	**ಚಕ್ಕುಬಂದಿ ಮತ್ತು ವಾರ್ಡಿಗೆ ಸೇರಿರುವ ಪ್ರದೇಶಗಳು**		
1	**2**	**3**		
1.	ವಾರ್ಡ್ ನಂ 1	**ಪೂರ್ವಕ್ಕೆ:**	ವಾರ್ಡ್ ನಂ 2ರ ಗಡಿ	ಸೊರಬ–ಬನವಾಸಿ ಮುಖ್ಯರಸ್ತೆಯ ಸ.ನಂ 253ರ ಉತ್ತರದ ಗಡಿಯಿಂದ ಪ್ರಾರಂಭಗೊಂಡು ಪೂರ್ವಾಭಿಮುಖವಾಗಿ ಸ.ನಂ
		ಪಶ್ಚಿಮಕ್ಕೆ:	ಪುರಸಭೆಯ ಸರಹದ್ದು	

		ಉತ್ತರಕ್ಕೆ:	ಪುರಸಭೆಯ ಸರಹದ್ದು	253, 254, 255, 256ರ ಉತ್ತರ ಗಡಿಯಂಚಿನಲ್ಲಿ ಕೊನೆಯವರೆಗೆ (ಸ.ನಂ.14ರ ಪ್ರಾರಂಭ) ಚಲಿಸಿ ಬಲಕ್ಕೆ ತಿರುಗಿ ಸ.ನಂ.12,11 ಮತ್ತು 10ರ ಪೂರ್ವ ದಿಕ್ಕಿನ ಗಡಿಯಂಚಿನಲ್ಲೇ ದಕ್ಷಿಣಾಭಿಮುಖವಾಗಿ ಚಲಿಸುತ್ತಾ ಸ.ನಂ 10ರ ದಕ್ಷಿಣ ಗಡಿ ಅಂಚಿನಲ್ಲಿ ಬಲಕ್ಕೆ ತಿರುಗಿ ಗಡಿ ಅಂಚಿನಲ್ಲೇ ಪಶ್ಚಿಮಾಭಿಮುಖವಾಗಿ ಸಾಗಿ ಸೊರಬ–ಬನವಾಸಿ ರಸ್ತೆಯನ್ನು ಬಂದು ತಲುಪುವುದು. ಅಲ್ಲಿಂದ ಎಡಕ್ಕೆ ತಿರುಗಿ ಅದೇ ರಸ್ತೆಯಲ್ಲೇ ಸೊರಬದ ಕಡೆಗೆ ಚಲಿಸುತ್ತಾ, ಶಾಂತಿಕೆರೆಯ ಪ್ರಾರಂಭದ ಅಂಚಿನಲ್ಲಿ (ಸ.ನಂ.278) ರಸ್ತೆಯನ್ನು, ದಾಟಿಕೊಂಡು ಸ.ನಂ 291ಕ್ಕೆ ಬಂದು ತಲುಪಿ ಅಲ್ಲಿಂದ ಸ.ನಂ 292, 295, 48, 83, 84ರ ಪೂರ್ವ ದಿಕ್ಕಿನ ಗಡಿಯಂಚಿನಲ್ಲೇ ಸಾಗುತ್ತಾ, ಸ.ನಂ 118ನ್ನು ಬಂದು ತಲುಪುವುದು. ಅಲ್ಲಿಂದ ಸ.ನಂ.118, 27, 191,194ರ ಉತ್ತರ ಗಡಿಯಂಚಿನಲ್ಲಿ ಸಾಗುತ್ತಾ ಸೊರಬ–ಬನವಾಸಿ ರಸ್ತೆಯನ್ನು ತಲುಪಿ ಎಡಕ್ಕೆ ತಿರುಗಿ ಅದೇ ರಸ್ತೆಯಲ್ಲೇ ಸೊರಬದ ಕಡೆ ಚಲಿಸಿ ಸ.ನಂ 184ರ ಉತ್ತರದ ಗಡಿಯನ್ನು ಬಂದು ತಲುಪುವುದು. ಮತ್ತೆ ಅಲ್ಲಿಂದ ಬಲಕ್ಕೆ ತಿರುಗಿ ಪಶ್ಚಿಮಾಭಿಮುಖವಾಗಿ ಕೆರೆಯಂಚಿನಲ್ಲೇ ಸಾಗುತ್ತಾ (ಅರಳಿಕೆರೆಯ ದಕ್ಷಿಣದ ಗಡಿಯಅಂಚಿನಲ್ಲಿ) ಪುರಸಭೆಯ ಸರಹದ್ದನ್ನು ತಲುಪುವುದು. (ಸ.ನಂ.242ರ ಉತ್ತರ ಗಡಿ ಅಂಚು) ಅಲ್ಲಿಂದ ಬಲಕ್ಕೆ ತಿರುಗಿ ಸ.ನಂ 245ರ ಪುರಸಭೆಯ ಸರಹದ್ದಿನ ಗಡಿಯಲ್ಲೇ ಚಲಿಸುತ್ತಾ, ಸ.ನಂ 246ಕ್ಕೆ ಬಂದು ತಲುಪುವುದು. ಸ.ನಂ 246ರ ಉತ್ತರ ಗಡಿಯಂಚಿನಲ್ಲಿ ಹಾಗೇ ಮುಂದೆ ಸಾಗುತ್ತಾ, ಸ.ನಂ.247, 248, 249, 250, 252ರ ಉತ್ತರದ ಗಡಿಯ ಅಂಚಿನಲ್ಲೇ ಚಲಿಸುತ್ತಾ ಬಂದು ಸೊರಬ ಬನವಾಸಿ ರಸ್ತೆಯನ್ನು ತಲುಪುವುದು. (ಸ.ನಂ 253ರ ಉತ್ತರದ ಗಡಿ ಅಂಚು)
		ದಕ್ಷಿಣಕ್ಕೆ:	ವಾರ್ಡ್ ನಂ.2ರ ಗಡಿ/ ಪುರಸಭೆಯ ಸರಹದ್ದು	
2.	ವಾರ್ಡ್ ನಂ 2	**ಪೂರ್ವಕ್ಕೆ:**	ದಂಡಾವತಿ ಹೊಳೆ, ವಾರ್ಡ್ ನಂ 21ರ ಗಡಿ	ಪುರಸಭೆಯ ಸರಹದ್ದಿನ ಉತ್ತರಗಡಿಯ ಸ.ನಂ 14, 15, 16, 34 ಗಳನ್ನು ಬಳಸಿಕೊಂಡು ದಂಡಾವತಿ ಹೊಳೆಯನ್ನು ಸ.ನಂ. 300ರ ಬಳಿ ಬಂದು ತಲುಪುವುದು. ಹಾಗೇಯೇ ಹೊಳೆಯ ದಂಡೆಯಲ್ಲೇ ಸಾಗುತ್ತಾ (.ಸ.ನಂ 300, 16, 37, 40, 39, 41, 44, 45, 67 ,68, 70, 96, 97, 98, 103, 26, 147ರ ಗಡಿಅಂಚು) ಸ.ನಂ 148ರ ಉತ್ತರ ಗಡಿ ಅಂಚಿನ ಪ್ರಾರಂಭದ ಬಿಂದುವನ್ನು ಬಂದು ತಲುಪುವುದು. ಅಲ್ಲಿಂದ ಬಲಕ್ಕೆ ತಿರುಗಿ ಸ.ನಂ.148 ಮತ್ತು 149ರ ಉತ್ತರ ಗಡಿಅಂಚಿನಲ್ಲೇ ದಕ್ಷಿಣದ ಕಡೆಗೆ ಚಲಿಸುತ್ತಾ ಸೊರಬ–ಬನವಾಸಿ ರಸ್ತೆಯನ್ನು ಬಂದು ತಲುಪುವುದು. ಅಲ್ಲಿಂದ ಅದೇ ರಸ್ತೆಯಲ್ಲೇ ಬನವಾಸಿ ಕಡೆಗೆ
		ಪಶ್ಚಿಮಕ್ಕೆ:	ವಾರ್ಡ್ ನಂ 1ರ ಗಡಿ ಹಾಗೂ ಪುರಸಭೆಯ ಸರಹದ್ದು	
		ಉತ್ತರಕ್ಕೆ:	ಪುರಸಭೆ ಸರಹದ್ದು, ವಾರ್ಡ್ ನಂ 1ರ ಗಡಿ	
		ದಕ್ಷಿಣಕ್ಕೆ:	ದಂಡಾವತಿ ಹೊಳೆ ಹಾಗೂ ವಾರ್ಡ್ ನಂ.21,22ರ ಗಡಿ	

				ಚಲಿಸುತ್ತಾ, ಗಣಪತಿ ದೇವಸ್ಥಾನದ ಬಳಿ ಬಂದು ತಲುಪುವುದು. ಅಲ್ಲಿಂದ ಎಡಕ್ಕೆ ತಿರುಗಿ ದೇವಸ್ಥಾನದ ಪಕ್ಕದ ರಸ್ತೆಯಲ್ಲಿಯೇ ಸಾಗುತ್ತಾ ಗೋಪಾಲ್ ವಕೀಲರ ಮನೆಯ ಮುಂದಿನ ರಸ್ತೆಯ ಮುಖಾಂತರ ಸೊರಬ ಸಿದ್ದಾಪುರ ರಸ್ತೆಯನ್ನು ಬಂದು ತಲುಪುವುದು. ಅಲ್ಲಿಂದ ಸಿದ್ದಾಪುರದ ಕಡೆಗೆ ಅದೇ ರಸ್ತೆಯಲ್ಲೇ ಚಲಿಸುತ್ತಾ, ಹಳೇ ಸೊರಬ ಗ್ರಾಮ ಪಂಚಾಯಿತಿ ಕಟ್ಟಡದ ಪಕ್ಕದ ರಸ್ತೆಗೆ ಬಂದು ತಲುಪುವುದು. ಅಲ್ಲಿಂದ ಎಡಕ್ಕೆ ತಿರುಗಿ, ಸ.ನಂ 174 ಮತ್ತು 173ರ ಮಧ್ಯಭಾಗದಲ್ಲಿರುವ ರಸ್ತೆಯಲ್ಲೇ ಸಾಗುತ್ತಾ (ಹಳೇ ಸೊರಬ ಗ್ರಾಮ ಪಂಚಾಯಿತಿ ಕಟ್ಟಡದ ಪಕ್ಕದ ರಸ್ತೆ) ಸ.ನಂ 175ಕ್ಕೆ ಬಂದು ತಲುಪುವುದು. ಅಲ್ಲಿಂದ ಸ.ನಂ 175ರಲ್ಲೇ ಸಾಗುತ್ತಾ (ಸ.ನಂ 175ನ್ನು ಹೊರತುಪಡಿಸಿ) (ಪಶ್ಚಿಮ ದಿಕ್ಕಿನ ಕಡೆಗೆ) ಸದರಿ ಸ.ನಂ.ನ ದಕ್ಷಿಣ ದಿಕ್ಕಿಗೆ ಬಂದು ತಲುಪಿ ಸ.ನಂ.162ನ್ನು ಛೇಧಿಸಿಕೊಂಡು ಪಶ್ಚಿಮ ದಿಕ್ಕಿಗೆ ಸಾಗುತ್ತಾ ಪುರಸಭೆಯ ಸರಹದ್ದನ್ನು ಬಂದು ತಲುಪುವುದು ಅಲ್ಲಿಂದ ಸ.ನಂ.163, 164, 166, 167, 204, 205, 242, 239ನ್ನು ಬಳಸಿಕೊಂಡು ವಾರ್ಡ್ ನಂ.1ರ ದಕ್ಷಿಣದ ಗಡಿಯನ್ನು ತಲುಪುವುದು. ಅಲ್ಲಿಂದ ಬಲಕ್ಕೆ ತಿರುಗಿ ಸ.ನಂ.242, 241, 240, 208, 206, 202,184 ಉತ್ತರದ ಗಡಿಯಂಚಿನಲ್ಲೇ ಪೂರ್ವ ದಿಕ್ಕಿನ ಕಡೆಗೆ ಚಲಿಸುತ್ತಾ ಸೊರಬ–ಬನವಾಸಿ ರಸ್ತೆಯನ್ನು ಬಂದು ತಲುಪುವುದು ಅಲ್ಲಿಂದ ರಸ್ತೆಯಲ್ಲೇ ಸಾಗುತ್ತಾ (ಬನವಾಸಿ ಕಡೆಗೆ) ಸ.ನಂ.194ರ ಉತ್ತರದ ಗಡಿಯಂಚನ್ನು ಬಂದು ತಲುಪಿ ಅಲ್ಲಿಂದ 194, 191, 27, 118ರ ಉತ್ತರ ಗಡಿಯಂಚಿನಲ್ಲೇ ಪೂರ್ವದ ದಿಕ್ಕಿಗೆ ಚಲಿಸುತ್ತಾ ಸ.ನಂ.118ರ ಕೊನೆಗೆ ಬಂದು ತಲುಪುವುದು. ಅಲ್ಲಿಂದ ಸ.ನಂ.85, 81, 82, 01, 02, 06, 07, 08, 09,19,18,17, 13,14 ಗಳನ್ನು ಬಳಸಿಕೊಂಡು (ಪಶ್ಚಿಮ ದಿಕ್ಕಿನ ಗಡಿಯಂಚು) ಸ.ನಂ.14ರ ಉತ್ತರದ ಗಡಿಯಂಚಿನ ಪ್ರಾರಂಭದ ಬಿಂದುವನ್ನು ಬಂದು ತಲುಪುವುದು.
03	ವಾರ್ಡ್ ನಂ 3	**ಪೂರ್ವಕ್ಕೆ:**	ವಾರ್ಡ್ ನಂ.4ರ ಗಡಿ	ಮಾರ್ಕೇಟ್ ರಸ್ತೆಯ ದಂಡಾವತಿ ಹೊಳೆ ಸೇತುವೆಯಿಂದ ಪ್ರಾರಂಭಗೊಂಡು ಪೂರ್ವ ದಿಕ್ಕಿನಲ್ಲಿ ಚಲಿಸುತ್ತಾ (ಸ.ನಂ 16 ಹಾಗೂ 14ನ್ನು ಬಳಸಿಕೊಂಡು) ಹೊಳೆಯ ದಂಡೆಯ ಅಂಚಿನಲ್ಲೇ ಸಾಗುತ್ತಾ ಸ.ನಂ.47ರ ಪಶ್ಚಿಮ ದಿಕ್ಕಿನ ಗಡಿಯ ಅಂಚನ್ನು ಬಂದು ತಲುಪುವುದು ಅಲ್ಲಿಂದ ದಕ್ಷಿಣಾಭಿಮುಖವಾಗಿ ಚಲಿಸುತ್ತಾ (ಸ.ನಂ.47, 48, 49, 50, 51, 13ರ ಪಶ್ಚಿಮದ ಗಡಿಯಂಚಿನಲ್ಲೇ ಸಾಗುತ್ತಾ ಅಂಬೇಡ್ಕರ್ ಬಡಾವಣೆಯ ರಸ್ತೆಯನ್ನು ಬಂದು ತಲುಪುವುದು. (ಭಾರತ್ ಶಾಮಿಯಾನದ
		ಪಶ್ಚಿಮಕ್ಕೆ:	ವಾರ್ಡ್ ನಂ.18 ಮತ್ತು 19ರ ಗಡಿ	
		ಉತ್ತರಕ್ಕೆ:	ದಂಡಾವತಿ ಹೊಳೆ	
		ದಕ್ಷಿಣಕ್ಕೆ:	ವಾರ್ಡ್ ನಂ 17 ಮತ್ತು 11ರ ಗಡಿ	

				ಹಿಂಬದಿ ರಸ್ತೆ) ಅದೇ ರಸ್ತೆಯಲ್ಲೇ ಮಾರ್ಕೇಟ್ ರಸ್ತೆಯ ಕಡೆಗೆ ಚಲಿಸುತ್ತಾ ಅಂಗನವಾಡಿಯ ಬಳಿ ಬಂದು ತಲುಪಿ ಅಲ್ಲಿಂದ ಎಡಕ್ಕೆ ತಿರುಗಿ (ಅಂಗನವಾಡಿ ರಸ್ತೆಯಲ್ಲೇ ಸಾಗುತ್ತಾ) ದಕ್ಷಿಣಾಭಿಮುಖವಾಗಿ ಚಲಿಸುತ್ತಾ, ಬಿ.ಎಸ್.ಎನ್.ಎಲ್ ಕಛೇರಿ ತಲುಪುವುದು. ಅಲ್ಲಿಂದ ಬಲಕ್ಕೆ ತಿರುಗಿ ಪಶ್ಚಿಮ ದಿಕ್ಕಿನಲ್ಲಿ ಸಾಗುತ್ತಾ ರಸ್ತೆಯ ಅಕ್ಕಪಕ್ಕದ ಮನೆಗಳನ್ನು ಸೇರಿಸಿಕೊಂಡು ಮಾರ್ಕೇಟ್ ರಸ್ತೆಯ ಪೂರ್ವಭಾಗದ ಮನೆಗಳ ಹಿಂಬದಿ ಬಂದು ತಲುಪುವುದು. ಅಲ್ಲಿಂದ ಎಡಕ್ಕೆ ತಿರುಗಿ ದಕ್ಷಿಣಾಭಿಮುಖವಾಗಿ ಚಲಿಸುತ್ತಾ ಹಳೆ ಪೋಸ್ಟ್ ಆಫೀಸ್ ರಸ್ತೆಯ ಉತ್ತರ ಭಾಗದ ಮನೆಗಳ ಹಿಂಬದಿಯಲ್ಲೇ ಚಲಿಸುತ್ತಾ ಸೊರಬ–ಶಿರಸಿ ಮುಖ್ಯರಸ್ತೆಯ ಉತ್ತರಭಾಗದ ಮನೆಗಳ ಹಿಂಬದಿ ಬಂದು ತಲುಪುವುದು. ಅಲ್ಲಿಂದ ಪಶ್ಚಿಮಾಭಿಮುಖವಾಗಿ ಚಲಿಸುತ್ತಾ (ಮುಖ್ಯರಸ್ತೆಗೆ ಹೊಂದಿಕೊಂಡಿರುವ ಉತ್ತರ ಭಾಗದ ಮನೆಗಳನ್ನು ಹೊರತುಪಡಿಸಿ) ಮಾರ್ಕೇಟ್ ರಸ್ತೆಯನ್ನು ಬಂದು ತಲುಪುವುದು. ಅಲ್ಲಿಂದ ಬಲಕ್ಕೆ ತಿರುಗಿ ಮಾರ್ಕೇಟ್ ರಸ್ತೆಯ ಅಕ್ಕಪಕ್ಕದ ಆಸ್ತಿಗಳನ್ನು ಬಳಸಿಕೊಂಡು ಉತ್ತರಾಭಿಮುಖವಾಗಿ ಚಲಿಸುತ್ತಾ ಮಸೀದಿಕೇರಿಗೆ ಬಂದು ತಲುಪುವುದು. ಅಲ್ಲಿಂದ ಎಡಕ್ಕೆ ತಿರುಗಿ ಮಸೀದಿಕೇರಿಯ ಎಡ ಹಾಗೂ ಬಲಭಾಗದ ಎಲ್ಲಾ ಮನೆಗಳನ್ನು ಸೇರಿಸಿಕೊಂಡು (ಮಠದವರೆಗೆ) ಮತ್ತೆ ಮಾರ್ಕೇಟ್ ರಸ್ತೆಗೆ ವಾಪಸ್ ಬಂದು ತಲುಪುವುದು. ನಂತರ ಮಾರ್ಕೇಟ್ ರಸ್ತೆಯಲ್ಲಿ ಉತ್ತರಾಭಿಮುಖವಾಗಿ ಚಲಿಸುತ್ತಾ ರಸ್ತೆಯ ಪಶ್ಚಿಮ ಭಾಗದ ಮನೆಗಳನ್ನು ಸೇರಿಸಿಕೊಂಡು ದಂಡಾವತಿ ಹೊಳೆಯ ಸೇತುವೆಯನ್ನು (ಪ್ರಾರಂಭದ ಬಿಂದು) ಬಂದು ತಲುಪುವುದು.
04	ವಾರ್ಡ್ ನಂ 4	**ಪೂರ್ವಕ್ಕೆ:**	ವಾರ್ಡ್ ನಂ.5 ರ ಗಡಿ	ಹಿರೇಶಕುನದ ಸ.ನಂ.30ರ ಉತ್ತರದ ಗಡಿಯಂಚಿನಿಂದ ಪ್ರಾರಂಭವಾಗಿ ಹೊಳೆ ದಂಡೆಯಂಚಿನಲ್ಲೇ ಸಾಗುತ್ತಾ (ಸ.ನಂ.30, 31, 32, 33, 34, 35ರ ಉತ್ತರದ ಗಡಿಅಂಚಿನಲ್ಲಿ) ಸ.ನಂ.35ರ ಅಂಚಿನಲ್ಲಿ ಬಲಕ್ಕೆ ತಿರುಗಿ ದಕ್ಷಿಣಾಭಿಮುಖವಾಗಿ ಚಲಿಸುತ್ತಾ. ಸ.ನಂ.36,37ರ ಉತ್ತರ ಗಡಿಯಲ್ಲಿ ಸಾಗುತ್ತಾ, ಹಾಗೆಯೇ ದಕ್ಷಿಣಾಭಿಮುಖವಾಗಿ ಚಲಿಸಿ ಸ.ನಂ.38,54 ಹಾಗೂ 56ರ ಪೂರ್ವದಿಕ್ಕಿನ ಗಡಿಯಂಚಿನಲ್ಲೇ ಸಾಗುತ್ತಾ ಉದ್ರಿ ರಸ್ತೆಯನ್ನು ಬಂದು ತಲುಪುವುದು ಅದೇ ರಸ್ತೆಯಲ್ಲಿ ಸೊರಬದ ಕಡೆಗೆ ಚಲಿಸುತ್ತಾ ಸೊರಬ–ಶಿರಾಳಕೊಪ್ಪ ಮುಖ್ಯ ರಸ್ತೆಯನ್ನು ತಲುಪುವುದು. ಸೊರಬ–ಶಿರಾಳಕೊಪ್ಪ ಮುಖ್ಯರಸ್ತೆಯ ಉತ್ತರ ಭಾಗದ ಆಸ್ತಿಗಳ ಹಿಂಬದಿಯಲ್ಲೇ ಚಲಿಸುತ್ತಾ ಹಳೇ ಪೋಸ್ಟ್ ಆಫೀಸ್ ರಸ್ತೆಯ ಪೂರ್ವಭಾಗದ ಆಸ್ತಿಗಳ ಹಿಂಬದಿ ಬಂದು
		ಪಶ್ಚಿಮಕ್ಕೆ:	ವಾರ್ಡ್ ನಂ.3 ರ ಗಡಿ	
		ಉತ್ತರಕ್ಕೆ:	ದಂಡಾವತಿ ಹೊಳೆ ಹಾಗೂ ವಾರ್ಡ್ ನಂ.5 ರ ಗಡಿ	
		ದಕ್ಷಿಣಕ್ಕೆ:	ವಾರ್ಡ್ ನಂ.17 ರ ಗಡಿ	

				ತಲುಪಿ ಅಲ್ಲಿಂದ ಹಳೇಪೋಸ್ಟ್ ಆಫೀಸ್ ರಸ್ತೆಯ ಪೂರ್ವಭಾಗದ ಆಸ್ತಿಗಳ ಹಿಂಬದಿಯಲ್ಲೇ ಚಲಿಸುತ್ತಾ ಮಾರ್ಕೇಟ್ ರಸ್ತೆಯನ್ನು ಬಂದು ತಲುಪುವುದು. ಅಲ್ಲಿಂದ ಉತ್ತರಾಭಿಮುಖವಾಗಿ ತಿರುಗಿ ಮಾರ್ಕೇಟ್ ರಸ್ತೆಯ ಪೂರ್ವಭಾಗದ ಆಸ್ತಿಯಗಳ ಹಿಂಬದಿಯಲ್ಲೇ ಚಲಿಸುತ್ತಾ (ಅನ್ಸರ್ ಮನೆಯ ಹಿಂಬದಿಯಿಂದ) ಬಂದು ಬಲಕ್ಕೆ ತಿರುಗಿ ಪೂರ್ವಾಭಿಮುಖವಾಗಿ ಚಲಿಸುತ್ತಾ. ಬಿ.ಎಸ್.ಎನ್.ಎಲ್ ಆಫೀಸ್ ರಸ್ತೆಯನ್ನು ತಲುಪುವುದು. (ಬಿ.ಎಸ್.ಎನ್.ಎಲ್ ಅನ್ನು ಹೊರತುಪಡಿಸಿ) ಬಿ.ಎಸ್.ಎನ್.ಎಲ್ ಆಫೀಸ್ ಹಿಂಬದಿಯಿಂದ ಎಡಕ್ಕೆ ತಿರುಗಿ ಉತ್ತರಾಭಿಮುಖವಾಗಿ ಚಲಿಸುತ್ತಾ (ಅಂಗನವಾಡಿ ರಸ್ತೆ) ಅಂಬೇಡ್ಕರ್ ಬಡಾವಣೆಯ ಮಾರ್ಕೇಟ್ ಗೆ ಹೋಗುವ ರಸ್ತೆಯನ್ನು ತಲುಪುವುದು. ಅಲ್ಲಿಂದ ಬಲಕ್ಕೆ ತಿರುಗಿ ರಸ್ತೆಯ ಪೂರ್ವಾಭಿಮುಖವಾಗಿ ಚಲಿಸುತ್ತಾ ಭಾರತ್ ಶಾಮಿಯಾನದ ಹಿಂಬದಿ ರಸ್ತೆಯನ್ನು ತಲುಪುವುದು. ಅಲ್ಲಿಂದ ಎಡಕ್ಕೆ ತಿರುಗಿ ಸ.ನಂ.13, 51, 50, 49, 48, 47ರ ಪಶ್ಚಿಮ ದಿಕ್ಕಿನ ಗಡಿಯಂಚಿನಲ್ಲೇ ಸಾಗುತ್ತಾ ಹೊಳೆಯ ದಂಡೆಯನ್ನು ಬಂದು ತಲುಪುವುದು ನಂತರ ಅಲ್ಲಿಂದ ಹೊಳೆಯ ದಂಡೆಯ ಅಂಚಿನಲ್ಲೇ ಸಾಗುತ್ತಾ ಸ.ನಂ.30ರ ಪ್ರಾರಂಭದ ಬಿಂದುವನ್ನು ಬಂದು ತಲುಪುವುದು.
05	ವಾರ್ಡ್ ನಂ 5	**ಪೂರ್ವಕ್ಕೆ:**	ವಾರ್ಡ್ ನಂ 7ರ ಗಡಿ	ಶೀಗೇಹಳ್ಳಿ ಬಳಿಯ (ಉದ್ರಿ ರಸ್ತೆಯ) ಪುರಸಭೆಯ ಉತ್ತರದ ಗಡಿಯಿಂದ ಪ್ರಾರಂಭಗೊಂಡು ಸ.ನಂ 30ರ ಗಡಿಅಂಚಿನಲ್ಲೇ ಪೂರ್ವದ ಕಡೆಗೆ ಸಾಗುತ್ತಾ ಸ.ನಂ 115ನ್ನು ಬಂದು ತಲುಪಿ ಅಲ್ಲಿಂದ ಸ.ನಂ 115, 114, 113ರ ಕೊಡಕಣಿ ಗ್ರಾಮದ ಉತ್ತರದ ಗಡಿಅಂಚಿನಲ್ಲೇ ಸಾಗುತ್ತಾ, ಸ.ನಂ 32ನ್ನು ಬಂದು ತಲುಪುವುದು. ಹಾಗೆಯೇ, ಸ.ನಂ 32, 40, 41ರ ದಕ್ಷಿಣದ ಗಡಿಅಂಚಿನಲ್ಲೇ (ಸ.ನಂ 32, 40, 41ನ್ನು ಸೇರಿಸಿಕೊಂಡು) ಸಾಗುತ್ತಾ ಉದ್ರಿ ರಸ್ತೆಯನ್ನು ಬಂದು ತಲುಪುವುದು (ಸ.ನಂ 41&46ರ ದಕ್ಷಿಣ ಭಾಗದ ಮಧ್ಯ ಬಿಂದು) ಅಲ್ಲಿಂದ ಎಡಕ್ಕೆ ತಿರುಗಿ ಶಾಮ್ ಭಟ್ ಮನೆ ಪಕ್ಕದ ರಸ್ತೆಯಲ್ಲಿ ದಕ್ಷಿಣಾಭಿಮುಖವಾಗಿ ಚಲಿಸಿ ಮುಂದೆ ಬಂದು ಶಿವಪ್ಪರವರ ಮನೆ ಸರ್ಕಲ್ ನಲ್ಲಿ ಅವರ ಮನೆ ಮುಂಭಾಗದ ರಸ್ತೆಯ ಎಡ ಹಾಗೂ ಬಲಭಾಗದ ಆಸ್ತಿಗಳನ್ನು ಸೇರಿಸಿಕೊಂಡು ಹಾಗೇ ದಕ್ಷಿಣಾಭಿಮುಖವಾಗಿ ಮುಂದೆ ಚಲಿಸುತ್ತಾ ಶಂಕರ್ ಜೋಗಿರವರ ಮನೆ ಮುಂದಿನ ಸರ್ಕಲ್ನ ರಸ್ತೆಯನ್ನು ದಾಟಿಕೊಂಡು ಹಾಸ್ಟೇಲ್ ಕಾಂಪೌಂಡ್ ಪಕ್ಕದಲ್ಲಿಯೇ ಚಲಿಸುತ್ತಾ ಮುಖ್ಯರಸ್ತೆಗೆ ಹೊಂದಿಕೊಂಡಿರುವ ಆಸ್ತಿಗಳ
		ಪಶ್ಚಿಮಕ್ಕೆ:	ವಾರ್ಡ್ ನಂ 6ರ ಗಡಿ ಹಾಗೂ ದಂಡಾವತಿ ಹೊಳೆ	
		ಉತ್ತರಕ್ಕೆ:	ದಂಡಾವತಿ ಹೊಳೆ ಹಾಗೂ ಪುರಸಭೆ ಸರಹದ್ದು	
		ದಕ್ಷಿಣಕ್ಕೆ:	ಸೊರಬ ಶಿವಮೊಗ್ಗ ಮುಖ್ಯ ರಸ್ತೆ	

				ಹಿಂಬದಿಗೆ ಬಂದು ತಲುಪುವುದು. ಅಲ್ಲಿಂದ ಬಲಕ್ಕೆ ತಿರುಗಿ ಪಶ್ಚಿಮಾಭಿಮುಖವಾಗಿ ಆಸ್ತಿಗಳ ಹಿಂಬಧಿಯಲ್ಲಿಯೇ ಚಲಿಸುತ್ತಾ ರೇಣುಕಾ ಗ್ರಾನೈಟ್ಸ್ ಬಳಿ ಸೊರಬ–ಶಿವಮೊಗ್ಗ ರಸ್ತೆಗೆ ಬಂದು ತಲುಪುವುದು. ಅಲ್ಲಿಂದ ಅದೇ ರಸ್ತೆಯಲ್ಲೇ ಪಶ್ಚಿಮಾಭಿಮುಖವಾಗಿ ಚಲಿಸುತ್ತಾ ಪ್ರಥಮ ದರ್ಜೆ ಕಾಲೇಜ್ ಗೆ ಹೋಗುವ ರಸ್ತೆಯನ್ನು ಬಂದು ತಲುಪುವುದು. ಅಲ್ಲಿಂದ ಎಡಕ್ಕೆ ತಿರುಗಿ ದಕ್ಷಿಣಾಭಿಮುಖವಾಗಿ ಚಲಿಸುತ್ತಾ, ಪ್ರಥಮ ದರ್ಜೆ ಕಾಲೇಜ್ ನ ಗೇಟಿನ ಬಳಿ ಬಂದು ತಲುಪುವುದು. ಅಲ್ಲಿಂದ ಬಲಕ್ಕೆ ತಿರುಗಿ ಆದೇ ರಸ್ತೆಯಲ್ಲೇ ಪಶ್ಚಿಮಾಭಿಮುಖವಾಗಿ ಚಲಿಸುತ್ತಾ, ರಸ್ತೆಯ ಕೊನೆಯಲ್ಲಿ ಬಲಕ್ಕೆ ತಿರುಗಿ ಸೊರಬ–ಶಿರಸಿ ಮುಖ್ಯರಸ್ತೆಯನ್ನು ಬಂದು ತಲುಪುವುದು. ಅಲ್ಲಿಂದ ಎಡಕ್ಕೆ ತಿರುಗಿ (ಸೊರಬದ ಕಡೆಗೆ) ಪಶ್ಚಿಮಾಭಿಮುಖವಾಗಿ ಸಾಗುತ್ತಾ, ಉದ್ರಿ ರಸ್ತೆ ಕ್ರಾಸ್ ಗೆ ಬಂದು ತಲುಪಿ. ಅಲ್ಲಿಂದ ಬಲಕ್ಕೆ ತಿರುಗಿ ಉದ್ರಿ ರಸ್ತೆಯಲ್ಲೇ ಮುಂದೆ ಸಾಗುತ್ತಾ, ಸ.ನಂ.56ರ ಅಂಚನ್ನು ಬಂದು ತಲುಪವುದು. ಅಲ್ಲಿಂದ ಸ.ನಂ 56, 54, 38ರ ಉತ್ತರದ ಗಡಿಅಂಚಿನಲ್ಲಿ ಸಾಗುತ್ತಾ, ಎಡಕ್ಕೆ ತಿರುಗಿ ಸ.ನಂ 37,36,35ರ ಉತ್ತರದ ಗಡಿಅಂಚಿನಲ್ಲೇ ಸಾಗುತ್ತಾ ದಂಡಾವತಿ ಹೊಳೆಯನ್ನು ತಲುಪುವುದು. ಹೊಳೆಯ ದಂಡೆಅಂಚಿನಲ್ಲೇ ಸಾಗುತ್ತಾ ಸ.ನಂ 30ರ (ಶೀಗೆಹಳ್ಳಿ ಬಳಿ) ಪುರಸಭೆಯ ಗಡಿಗೆ ಬಂದು ತಲುಪವುದು.
06	ವಾರ್ಡ್ ನಂ 6	**ಪೂರ್ವಕ್ಕೆ:**	ವಾರ್ಡ್ ನಂ 7ರ ಗಡಿ	ಚಿಕ್ಕಶಕುನ ಬೋಳಗಟ್ಟೆ ಕೆರೆಯ ದಕ್ಷಿಣ ಭಾಗದಿಂದ ಪ್ರಾರಂಭವಾಗಿ ಪೂರ್ವಾಭಿಮುಖವಾಗಿ ಚಲಿಸುತ್ತಾ (ಸ.ನಂ 6, 9, 10,11,12 ಮತ್ತು 13ರ ದಕ್ಷಿಣ ಗಡಿ ಅಂಚಿನಲ್ಲಿ ಸಾಗಿಬಂದು ಸ.ನಂ 1ರ ಪೂರ್ವ ಭಾಗದ ಗಡಿ ಅಂಚಿನಲ್ಲಿ ಬಲಕ್ಕೆ ತಿರುಗಿ ಕಾನುಕೊಪ್ಪ ಗಡಿ ಅಂಚಿನಲ್ಲಿ ದಕ್ಷಿಣಾಭಿಮುಖವಾಗಿ ಚಲಿಸುತ್ತಾ ತೋಟಗಾರಿಕೆ ಇಲಾಖೆ ಹಾಗೂ ಪ್ರಥಮ ದರ್ಜೆ ಕಾಲೇಜ್ ಹಿಂಬದಿಯಿಂದ ಸ.ನಂ 64ರ ಪೂರ್ವದ ಗಡಿಯನ್ನು ಬಂದು ತಲುಪುವುದು. ಅಲ್ಲಿಂದ ಬಲಕ್ಕೆ ತಿರುಗಿ ಉತ್ತರಾಭಿಮುಖವಾಗಿ ಸ.ನಂ 64ರ ಗಡಿಯಲ್ಲಿಯೇ ಚಲಿಸುತ್ತಾ ರಸ್ತೆಯ ಅಂಚಿನಲ್ಲಿ ಪುನ: ಬಲಕ್ಕೆ ತಿರುಗಿ ಪ್ರಥಮ ದರ್ಜೆ ಕಾಲೇಜಿನ ಗೇಟಿನ ಬಳಿ ಬಂದು ತಲುಪಿ ಅಲ್ಲಿಂದ ಎಡಕ್ಕೆ ತಿರುಗಿ ಸೊರಬ–ಶಿವಮೊಗ್ಗ ರಸ್ತೆಗೆ ಬಂದು ತಲುಪಿ ಅಲ್ಲಿಂದ ಬಲಕ್ಕೆ ತಿರುಗಿ ರಸ್ತೆಯಲ್ಲಿ ಪೂರ್ವಾಭಿಮುಖವಾಗಿ ಸಾಗುತ್ತಾ ರಸ್ತೆಯ ಬಲಭಾಗದ ಆಸ್ತಿಗಳನ್ನು ಒಳಗೊಂಡು ರೇಣುಕಾ ಗ್ರಾನೈಟ್ಸ್ ಬಳಿ ರಸ್ತೆಯ ಎಡ ಹಾಗೂ ಬಲಭಾಗದ ಆಸ್ತಿಗಳನ್ನು ಒಳಗೊಂಡು ಹಾಸ್ಟೇಲ್ ಕಾಂಪೌಂಡ್ ಬಳಿ ಬಂದು ಎಡಕ್ಕೆ ತಿರುಗಿ
		ಪಶ್ಚಿಮಕ್ಕೆ:	ವಾರ್ಡ್ ನಂ 10 ಹಾಗೂ ವಾರ್ಡ್ ನಂ 5 ರ ಗಡಿ	
		ಉತ್ತರಕ್ಕೆ:	ವಾರ್ಡ್ ನಂ 5 ಹಾಗೂ 7ರ ಗಡಿ	
		ದಕ್ಷಿಣಕ್ಕೆ:	ವಾರ್ಡ್ ನಂ 7ರ ಗಡಿ	

				ಕಾಂಪೌಂಡ್ ಪಕ್ಕದಲ್ಲಿಯೇ ಉತ್ತರಾಭಿಮುಖವಾಗಿ ಚಲಿಸಿ ಚಿಕ್ಕಶಕುನ ರಸ್ತೆಯನ್ನು ಬಂದು ತಲುಪುವುದು. ಅಲ್ಲಿಂದ ರಸ್ತೆಯಲ್ಲೇ ಸಾಗುತ್ತಾ ಬೋಳಗಟ್ಟೆ ಕೆರೆಯ ದಕ್ಷಿಣ ಭಾಗದ ಗಡಿಯಂಚನ್ನು ಬಂದು ತಲುಪುವುದು.
07	ವಾರ್ಡ್ ನಂ 7	**ಪೂರ್ವಕ್ಕೆ:**	ವಾರ್ಡ್ ನಂ 8ರ ಗಡಿ	ಚಿಕ್ಕಶಕುನ ಬೋಳಗಟ್ಟೆ ಕೆರೆಯ ಪೂರ್ವ ಭಾಗದ ಗಡಿ ಅಂಚಿನಲ್ಲೇ ಉತ್ತರಾಭಿಮುಖವಾಗಿ ಕೊಡಕಣಿ ಗ್ರಾಮದ ಸರಹದ್ದಿನಲ್ಲಿಯೇ ಸಾಗುತ್ತಾ ಪುರಸಭೆಯ ಸರಹದ್ದನ್ನು ತಲುಪುವುದು. (ಸ.ನಂ. 41,40,32,31 ನ್ನು ಹೊರತುಪಡಿಸಿ) ಅಲ್ಲಿಂದ ಪುರಸಭೆ ಸರಹದ್ದಿನಲ್ಲಿಯೇ ಪೂರ್ವ ದಿಕ್ಕಿಗೆ ಸಾಗುತ್ತಾ ತಾವರೆಕೆರೆ ರಸ್ತೆಯೂ ಪುರಸಭೆಯ ಸರಹದ್ದನ್ನು ಸಂಧಿಸುವ ಉತ್ತರ ಭಾಗದ ಬಿಂಧುವಿಗೆ ಬಂದು ತಲುಪಿ ಅಲ್ಲಿಂದ ಬಲಕ್ಕೆ ತಿರುಗಿ ದಕ್ಷಿಣಾಭಿಮುಖವಾಗಿ ತಾವರೆಕೆರೆ ರಸ್ತೆಯಲ್ಲೇ ಚಲಿಸುತ್ತಾ ಸ.ನಂ 54 ಮತ್ತು 55ರ ಮಧ್ಯಭಾಗಕ್ಕೆ ಬಂದು ತಲುಪುವುದು. ಅಲ್ಲಿಂದ ಬಲಕ್ಕೆ ತಿರುಗಿ ಪಶ್ಚಿಮಾಭಿಮುಖವಾಗಿ ಸಾಗುತ್ತಾ (ಸ.ನಂ 55 ಮತ್ತು 51ರ ಉತ್ತರ ಗಡಿ ಅಂಚಿನಲ್ಲಿ) ಸಾಗುತ್ತಾ (ಸ.ನಂ 55 ಮತ್ತು 51ನ್ನು ಹೊರತುಪಡಿಸಿ) ಸೊರಬ ಶಿವಮೊಗ್ಗ ಮುಖ್ಯರಸ್ತೆಯನ್ನು ಬಂದು ತಲುಪುವುದು. ಅಲ್ಲಿಂದ ಸೊರಬ ಶಿವಮೊಗ್ಗ ಮುಖ್ಯರಸ್ತೆಯಲ್ಲಿ ಶಿವಮೊಗ್ಗ ಕಡೆಗೆ ಚಲಿಸುತ್ತಾ, ಗುಂಡಿ ಮಂಜಪ್ಪನವರ ಮನೆಬಳಿ ಬಂದು ತಲುಪುವುದು. ಅಲ್ಲಿಂದ ಬಲಕ್ಕೆ ತಿರುಗಿ, ಗುಂಡಿ ಮಂಜಪ್ಪನವರ ಮನೆ ಹಿಂಬದಿಯಿಂದ ಪುನಃ ಪಶ್ಚಿಮಾಭಿಮುಖವಾಗಿ ಸಾಗುತ್ತಾ (ರಸ್ತೆಯ ಎಡ ಹಾಗೂ ಬಲಭಾಗದ ಆಸ್ತಿಗಳನ್ನು ಸೇರಿಸಿಕೊಂಡು) ಸಂತೆ ಓಣಿಯನ್ನು ಬಂದು ತಲುಪುವುದು. ಅಲ್ಲಿಂದ ಎಡಕ್ಕೆ ತಿರುಗಿ (ಸಂತೆ ಓಣಿ ರಸ್ತೆಯ ಪೂರ್ವಭಾಗದ ಆಸ್ತಿಗಳ ಹಿಂಭದಿಯಿಂದ) ದಕ್ಷಿಣಾಭಿಮುಖವಾಗಿ ಚಲಿಸುತ್ತಾ ಕುಳವಳ್ಳೇರ್ ಕೇರಿಗೆ ಬಂದು ತಲುಪುವುದು. ಅಲ್ಲಿಂದ ಎಡಕ್ಕೆ ತಿರುಗಿ ಪೂರ್ವಾಭಿಮುಖವಾಗಿ ಚಲಿಸುತ್ತಾ (ರಸ್ತೆಯ ಉತ್ತರ ಭಾಗದ ಆಸ್ತಿಗಳನ್ನು ಸೇರಿಕೊಂಡು) ಗೌಡರ ಕೇರಿಯ ಮುಖಾಂತರ ಜಂಬಳ್ಳಿಯರ ಕೇರಿಗೆ ಬಂದು ತಲುಪಿ ಅಲ್ಲಿಂದ ಬಲಕ್ಕೆ ತಿರುಗಿ ದಕ್ಷಿಣಾಭಿಮುಖವಾಗಿ ಚಲಿಸಿ (ರಸ್ತೆಯ ಪಶ್ಚಿಮ ಭಾಗದ ಆಸ್ತಿಗಳನ್ನು ಹೊರತುಪಡಿಸಿ) ಕಡೇಮನೆ ಪುಟ್ಟಪ್ಪನ ಮನೆ ಮುಖಾಂತರ ಹೆಗ್ಗೋಡರ ಮನೆಗಳ ಪಕ್ಕದ ರಸ್ತೆಯಲ್ಲೇ ಸಾಗುತ್ತಾ(ಕುಣಜಿಗೆ ಹೋಗುವ ರಸ್ತೆ) ಕುಣಜಿಯನ್ನು ತಲುಪುವುದು. ಅಲ್ಲಿಂದ ಬಲಕ್ಕೆ ತಿರುಗಿ ವಾರ್ಡ್ ನಂ 8ರ ಗಡಿಅಂಚಿನಲ್ಲೇ ಸಾಗುತ್ತಾ ಸ.ನಂ 17ಕ್ಕೆ ಬಂದು ತಲುಪುವುದು. ಅಲ್ಲಿಂದ ವಾರ್ಡ್ ನಂ 10ರ ಗಡಿಯಲ್ಲೇ ಚಲಿಸಿ ಸ.ನಂ.65 ಮತ್ತು 64ರ ಗಡಿಯನ್ನು ಬಂದು ತಲುಪುವುದು. ಅಲ್ಲಿಂದ ಪ್ರಥಮ ಧರ್ಜೆ
		ಪಶ್ಚಿಮಕ್ಕೆ:	ವಾರ್ಡ್ ನಂ 10,6, ಮತ್ತು ವಾರ್ಡ್ ನಂ 5ರ ಗಡಿ	
		ಉತ್ತರಕ್ಕೆ:	ಪುರಸಭೆ ಸರಹದ್ದು	
		ದಕ್ಷಿಣಕ್ಕೆ:	ವಾರ್ಡ್ ನಂ 8ರ ಗಡಿ	

				ಕಾಲೇಜ್ ಹಾಗೂ ತೋಟಗಾರಿಕೆ ಇಲಾಖೆ ಹಿಂಬದಿಯಿಂದ ಕಾನುಕೊಪ್ಪಕ್ಕೆ ಬಂದು ತಲುಪುವುದು. ಅಲ್ಲಿಂದ ಕಾನುಕೊಪ್ಪದ ಸರಹದ್ದಿನ ಪೂರ್ವದ ಕಡೆಗೆ ಗಡಿ ಅಂಚಿನಲ್ಲಿಯೇ ಸಾಗುತ್ತಾ ಸೊರಬ–ಶಿವಮೊಗ್ಗ ರಸ್ತೆಯನ್ನು ಬಂದು ತಲುಪುವುದು. ಅಲ್ಲಿಂದ ಕಾನುಕೊಪ್ಪ ಸ.ನಂ 1ರ ಪೂರ್ವದ ಗಡಿ ಅಂಚಿನಲ್ಲಿಯೇ ಉತ್ತರಾಭಿಮುಖವಾಗಿ ಸಾಗುತ್ತಾ ಕೊಡಕಣಿ ಸ.ನಂ 13ರನ್ನು ತಲುಪಿ ಅಲ್ಲಿಂದ ಎಡಕ್ಕೆ ತಿರುಗಿ ಪಶ್ಚಿಮಾಭಿಮುಖವಾಗಿ ಸಾಗುತ್ತಾ(ಸ.ನಂ. 13, 12,11,10, 9 ಹಾಗೂ 6ರ ದಕ್ಷಿಣ ಗಡಿ ಅಂಚಿನಲ್ಲಿ) ಚಿಕ್ಕಶಕುನದ ಸ.ನಂ 41ರಲ್ಲಿರುವ ಬೋಳಗಟ್ಟೆ ಕೆರೆಯ ಪೂರ್ವ ಭಾಗವನ್ನು ತಲುಪುವುದು.
08	ವಾರ್ಡ್ ನಂ 8	**ಪೂರ್ವಕ್ಕೆ:**	ಪುರಸಭೆ ಸರಹದ್ದು	ತಾವರೆಕೆರೆ ರಸ್ತೆಯು ಪುರಸಭೆಯ ಸರಹದ್ದನ್ನು ಸಂಧಿಸುವ ಉತ್ತರ ಭಾಗದ ಬಿಂಧುವಿನಿಂದ ಪ್ರಾರಂಭವಾಗಿ ಸ.ನಂ 116ರ ಪೂರ್ವ ದಿಕ್ಕಿನ ಕಡೆಗೆ ಗಡಿಯಂಚಿನಲ್ಲೇ ಸಾಗುತ್ತಾ, ಉತ್ತರ ಗಡಿಯಿಂದ ಪೂರ್ವದ ಗಡಿ ಮುಖಾಂತರ ಸೊರಬ–ಶಿವಮೊಗ್ಗ ರಸ್ತೆಯನ್ನು ತಲುಪಿ ಅಲ್ಲಿಂದ ಪುರಸಭೆಯ ಸರಹದ್ದಿನಲ್ಲೇ ಚಲಿಸುತ್ತಾ ಕುಣಜಿಯನ್ನು ತಲುಪುವುದು.(ಸ.ನಂ 158ರ ಗಡಿಯಂಚಿನಲ್ಲಿ) ಅಲ್ಲಿಂದ ಪುನ: (ಕುಣಜಿ ದಕ್ಷಿಣ ಗಡಿಅಂಚು) ಪುರಸಭೆಯ ಸರಹದ್ದಿನಲ್ಲೇ ಸಾಗುತ್ತಾ ಕುಣಜಿ ಸ.ನಂ 17ರ ದಕ್ಷಿಣ ಭಾಗದ ಗಡಿಅಂಚಿನಲ್ಲೇ ಸಾಗಿಬಂದು ಬಲಕ್ಕೆ ತಿರುಗಿ ಉತ್ತರದ ಗಡಿಯಂಚಿನಲ್ಲಿ ಸಾಗಿಬಂದು ಸ.ನಂ18, 20 ಹಾಗೂ 01ರ ಉತ್ತರ ಗಡಿಯಂಚಿನಲ್ಲೇ ಚಲಿಸುತ್ತಾ, ಕುಣಜಿ–ಕೊಡಕಣಿ ರಸ್ತೆಯಲ್ಲೇ ಸಾಗಿಬಂದು ಹೆಗ್ಗೋಡರ ಮನೆಗಳನ್ನೊಳಗೊಂಡು ಕಡೆಮನೆ ಪುಟ್ಟಪ್ಪನ ಮನೆ ಮುಖಾಂತರ, ಹಾಗೂ ಶೆಟ್ಟಿರ ಕೇರಿ ಮುಖಾಂತರ (ರಸ್ತೆಯ ಎಡ ಹಾಗೂ ಬಲಭಾಗದ ಎಲ್ಲಾ ಆಸ್ತಿಗಳನ್ನು ಸೇರಿಸಿಕೊಂಡು) ಗೌಡರ ಕೇರಿ ರಸ್ತೆಗೆ ಬಂದು ತಲುಪುವುದು. ಅಲ್ಲಿಂದ ಪಶ್ಚಿಮ ದಿಕ್ಕಿನಲ್ಲಿ ಸಾಗುತ್ತಾ(ಗೌಡರ ಕೇರಿಯ ಎಡ ಹಾಗೂ ಬಲಭಾಗದ ಆಸ್ತಿಗಳನ್ನು ಹೊರತುಪಡಿಸಿ) ಸಂತೆ ಓಣಿಯವರೆಗೆ ಬಂದು ತಲುಪಿ ಅಲ್ಲಿಂದ ಬಲಕ್ಕೆ ತಿರುಗಿ ಉತ್ತರಾಭಿಮುಖವಾಗಿ ಸಾಗಿ (ರಸ್ತೆಯ ಪೂರ್ವ ಭಾಗದ ಆಸ್ತಿಗಳ ಹಿಂಬದಿಯಲ್ಲಿ ಸಾಗುತ್ತಾ) ಸೊರಬ–ಶಿವಮೊಗ್ಗ ರಸ್ತೆಯಲ್ಲಿ ತಲುಪುವುದು ಅಲ್ಲಿಂದ ಬಲಕ್ಕೆ ತಿರುಗಿ ಪೂರ್ವ ದಿಕ್ಕಿನ ಕಡೆಗೆ (ರಸ್ತೆಯ ದಕ್ಷಿಣ ಭಾಗದ ಆಸ್ತಿಗಳ ಹಿಂಬದಿಯಿಂದ) ಗುಂಡಿ ಮಂಜಪ್ಪರವರ ಮನೆಯವರೆಗೆ ಚಲಿಸಿ ಅಲ್ಲಿಂದ ಎಡಕ್ಕೆ ತಿರುಗಿ ಉತ್ತರಾಭಿಮುಖವಾಗಿ ಚಲಿಸಿ ರಸ್ತೆಯನ್ನು ದಾಟಿಕೊಂಡು ಸ.ನಂ 51 ಹಾಗೂ 55ರ ಉತ್ತರದ ಗಡಿಯಂಚಿನಲ್ಲಿ ಪೂರ್ವದ ಕಡೆಗೆ ಚಲಿಸುತ್ತಾ, ತಾವರೆಕೆರೆ ರಸ್ತೆಯನ್ನು ತಲುಪಿ ಅಲ್ಲಿಂದ ಎಡಕ್ಕೆ
		ಪಶ್ಚಿಮಕ್ಕೆ:	ವಾರ್ಡ್ ನಂ 07ರ ಗಡಿ	
		ಉತ್ತರಕ್ಕೆ:	ಪುರಸಭೆ ಸರಹದ್ದು	
		ದಕ್ಷಿಣಕ್ಕೆ:	ಪುರಸಭೆ ಸರಹದ್ದು	

				ತಿರುಗಿ ಉತ್ತರಾಭಿಮುಖವಾಗಿ ತಾವರೆಕೆರೆ ರಸ್ತೆಯಲ್ಲೇ ಚಲಿಸುತ್ತಾ ಪುರಸಭೆಯ ಸರಹದ್ದನ್ನು ತಲುಪುವುದು.
09	ವಾರ್ಡ್ ನಂ 9	**ಪೂರ್ವಕ್ಕೆ:**	ವಾರ್ಡ್ ನಂ 10 ಮತ್ತು 12ರ ಗಡಿ	ಪುರಸಭೆಯ ಕಾನಕೇರಿ ಕನ್ನಡ ಶಾಲೆಗೆ ಹೋಗುವ ರಸ್ತೆಯಿಂದ ಪ್ರಾರಂಭವಾಗಿ(ರಿಂಗ್ ಲೋಕೇಶನ ಮನೆ ಹತ್ತಿರ) ಪೂರ್ವಾಭಿಮುಖವಾಗಿ ರಿಂಗ್ ಲೋಕೇಶನ ಮನೆ ರಸ್ತೆಯಲ್ಲಿ ಎಡ ಹಾಗೂ ಬಲಭಾಗದ ಆಸ್ತಿಗಳನ್ನು ಹೊರತುಪಡಿಸಿ(ರಸ್ತೆಯ ದಕ್ಷಿಣ ಭಾಗದ ಆಸ್ತಿಗಳ ಹಿಂಬದಿಯಲ್ಲಿ ಸಾಗುತ್ತಾ) ವಾಟರ್ ಟ್ಯಾಂಕ್ ರಸ್ತೆಯನ್ನು ಬಂದು ತಲುಪಿ ಅಲ್ಲಿಂದ ಬಲಕ್ಕೆ ತಿರುಗಿ ದಕ್ಷಿಣಾಭಿಮುಖವಾಗಿ ನೀರಿನ ಟ್ಯಾಂಕ್ ರಸ್ತೆಯ ಪಶ್ಚಿಮಭಾಗದ ಆಸ್ತಿಗಳ ಹಿಂಬದಿ) ಚಲಿಸುತ್ತಾ ಖಯೂಂ ಮನೆ ರಸ್ತೆಗೆ ಬಂದು ತಲುಪಿ ಅಲ್ಲಿಂದ ಎಡಕ್ಕೆ ತಿರುಗಿ ಪೂರ್ವಾಭಿಮುಖವಾಗಿ ಚಲಿಸುತ್ತಾ (ಖಯೂಂ ಮನೆ ರಸ್ತೆಯ ದಕ್ಷಿಣ ಭಾಗದ ಆಸ್ತಿಗಳ ಹಿಂಬದಿಯಲ್ಲಿ) ಕಾನಕೇರಿ ಸಮುದಾಯ ಭವನದ ರಸ್ತೆಯನ್ನು ಬಂದು ತಲುಪುವುದು. ಅಲ್ಲಿಂದ ಬಲಕ್ಕೆ ತಿರುಗಿ ದಕ್ಷಿಣಾಭಿಮುಖವಾಗಿ ಚಲಿಸುತ್ತಾ (ರಸ್ತೆಯ ಪಶ್ಚಿಮ ಭಾಗದ ಆಸ್ತಿಗಳ ಹಿಂಬದಿಯಲ್ಲಿ ಚಲಿಸುವುದು) ಬಿ.ಸಿ.ಎಂ ಹಾಸ್ಟೇಲ್ ರಸ್ತೆಯನ್ನು ದಾಟಿಕೊಂಡು ಶ್ರೀ.ಎಸ್.ಬಂಗಾರಪ್ಪ ಸ್ಟೇಡಿಯಂ ಬಳಿ ಬಂದು ತಲುಪಿ, ಅಲ್ಲಿಂದ ಎಡಕ್ಕೆ ತಿರುಗಿ ರಸ್ತೆಯಲ್ಲೇ ಸಾಗುತ್ತಾ ಕೋರ್ಟ್ ಮುಂಭಾಗದ ಬಳಿ ಬಂದು ತಲುಪವುದು. ಮತ್ತೆ ಅಲ್ಲಿಂದ ಎಡಕ್ಕೆ ತಿರುಗಿ ಆಸ್ಪತ್ರೆ ಪಕ್ಕದ ರಸ್ತೆಯಲ್ಲಿ ಪೂರ್ವಾಭಿಮುಖವಾಗಿ ಚಲಿಸುತ್ತಾ ಸೊರಬ–ಸಾಗರ ಮುಖ್ಯರಸ್ತೆಯನ್ನು ತಲುಪುವುದು. ಅಲ್ಲಿಂದ ಬಲಕ್ಕೆ ತಿರುಗಿ(ಸಾಗರದ ಕಡೆಗೆ) ರಸ್ತೆಯಲ್ಲಿ ದಕ್ಷಿಣಾಭಿಮುಖವಾಗಿ ಸಾಗುತ್ತಾ ಸ.ನಂ 84ರ ದಕ್ಷಿಣ ಭಾಗದ ಗಡಿಯನ್ನು ಬಂದು ತಲುಪವುದು. ಅಲ್ಲಿಂದ ಎಡಕ್ಕೆ ತಿರುಗಿ ಪೂರ್ವಾಭಿಮುಖವಾಗಿ ಚಲಿಸುತ್ತಾ (ಸ.ನಂ 109, 108ನ್ನು ಒಳಗೊಂಡು) ಸ.ನಂ.109 ಮತ್ತು 108ರ ಗಡಿಯಲ್ಲಿ ಸಾಗುತ್ತಾ ಪುರಸಭೆಯ ಸರಹದ್ದನ್ನು ತಲುಪುವುದು. ಅಲ್ಲಿಂದ ಸ.ನಂ.108ರ ದಕ್ಷಿಣ ಭಾಗದ ಗಡಿ ಅಂಚಿನಲ್ಲಿ ಸಾಗುತ್ತಾ ಸೊರಬ–ಸಾಗರ ಮುಖ್ಯರಸ್ತೆಯನ್ನು ದಾಟಿಕೊಂಡು ಸ.ನಂ 111, 28, 29, 30ರ ದಕ್ಷಿಣ ಗಡಿಯಲ್ಲಿ ಸಾಗುತ್ತಾ(ಪುರಸಭೆಯ ಸರಹದ್ದು) ದಂಡಾವತಿ ಹೊಳೆಯನ್ನು ತಲುಪುವುದು. ಅಲ್ಲಿಂದ ದಂಡಾವತಿ ಹೊಳೆಯ ದಂಡೆ ಅಂಚಿನಲ್ಲೇ ಉತ್ತರ ದಿಕ್ಕಿನಲ್ಲಿ ಚಲಿಸುತ್ತಾ(ಸ.ನಂ 31, 32, 34, 35, 36, 37, 38, 39, 40, 41, 42, 67)ಸ.ನಂ 7ರ ಉತ್ತರ ಗಡಿಯನ್ನು ಬಂದು ತಲುಪುವುದು. ಅಲ್ಲಿಂದ ಸ.ನಂ 7 ಉತ್ತರ ಗಡಿ ಅಂಚಿನಲ್ಲಿ ಪೂರ್ವಾಭಿಮುಖವಾಗಿ ಚಲಿಸುತ್ತಾ, ಸ.ನಂ
		ಪಶ್ಚಿಮಕ್ಕೆ:	ದಂಡಾವತಿ ಹೊಳೆ	
		ಉತ್ತರಕ್ಕೆ:	ವಾರ್ಡ್ ನಂ 10,11 ಹಾಗೂ 13ರ ಗಡಿ	
		ದಕ್ಷಿಣಕ್ಕೆ:	ಪುರಸಭೆಯ ಸರಹದ್ದು	

				8ನ್ನು ಕೊನೆಗೊಂಡು ಸ.ನಂ 13 ಮತ್ತು 15ರ ಪೂರ್ವ ಭಾಗದ ಗಡಿಯಲ್ಲಿ ಉತ್ತರಾಭಿಮುಖವಾಗಿ ಚಲಿಸುತ್ತಾ ಮರೂರು ರಸ್ತೆಯ ಪೂರ್ವ ಭಾಗದ ಆಸ್ತಿಗಳ ಹಿಂಬದಿಯಲ್ಲಿ ಸಾಗುತ್ತಾ ನಾಗರಕಟ್ಟೆ ಬಳಿ ಬಂದು ತಲುಪವುದು. ಅಲ್ಲಿಂದ ಬಲಕ್ಕೆ ತಿರುಗಿ ಪೂರ್ವಾಭಿಮುಖವಾಗಿ ಚಲಿಸುತ್ತಾ ರಾಧಾ ಸಿಸ್ಟರ್ ಮನೆಯ ಪಕ್ಕಕ್ಕೆ ಬಂದು ತಲುಪುವುದು. ಅಲ್ಲಿಂದ ಎಡಕ್ಕೆ ತಿರುಗಿ ಉರ್ದು ಶಾಲೆಯ ಕಡೆಗೆ ಚಲಿಸುತ್ತಾ ರಸ್ತೆಯ ಎಡ ಹಾಗೂ ಬಲಭಾಗದ ಆಸ್ತಿಗಳನ್ನು ಸೇರಿಸಿಕೊಂಡು) ರಿಂಗ್ ಲೋಕೇಶನ ಮನೆಯ ರಸ್ತೆಯ ಬಳಿ ಬಂದು ಪ್ರಾರಂಭದ ಬಿಂದುವನ್ನು ತಲುಪುವುದು.
10	ವಾರ್ಡ್ ನಂ 10	**ಪೂರ್ವಕ್ಕೆ:**	ವಾರ್ಡ್ ನಂ 17ರ ಗಡಿ	ಸೊರಬ–ಶಿರಸಿ ಮುಖ್ಯರಸ್ತೆಯಿಂದ ಪ್ರಾರಂಭವಾಗಿ (ದಕ್ಷಿಣ ಭಾಗದ ಆಸ್ತಿಗಳನ್ನು ಮಾತ್ರ ಒಳಗೊಂಡು) ಪಿ.ಡಬ್ಲೂ.ಡಿ ಕಾಲೋನಿ ರಸ್ತೆಯಲ್ಲಿ ದಕ್ಷಿಣಾಭಿಮುಖವಾಗಿ ಚಲಿಸುತ್ತಾ, ಸ.ನಂ 64, 65, 66, 67, 68, 914, 92, 93, 106 ಹಾಗೂ 107ರ ಪೂರ್ವಭಾಗದ ಗಡಿಯಂಚಿನಲ್ಲೇ ಸಾಗುತ್ತಾ ಸ.ನಂ 107ರ ದಕ್ಷಿಣಭಾಗದ ಗಡಿಅಂಚಿನಲ್ಲಿ ಸಾಗುತ್ತಾ ಸ.ನಂ 108 ಹಾಗೂ 109ರ ಉತ್ತರ ಗಡಿಅಂಚಿನ ಮುಖಾಂತರ ಸೊರಬ–ಸಾಗರ ಮುಖ್ಯರಸ್ತೆಯನ್ನು ತಲುಪಿ ಅಲ್ಲಿಂದ ಬಲಕ್ಕೆ ತಿರುಗಿ ಅದೇ ರಸ್ತೆಯಲ್ಲೇ ಉತ್ತರಾಭಿಮುಖವಾಗಿ ಚಲಿಸುತ್ತಾ (ರಸ್ತೆಯ ಪೂರ್ವಭಾಗದ ಆಸ್ತಿಗಳನ್ನು ಒಳಗೊಂಡು) ಲಯನ್ಸ್ ಕಲ್ಯಾಣ ಮಂದಿರದ ಬಳಿ ಬಂದು ತಲುಪುವುದು. ಅಲ್ಲಿಂದ ಎಡಕ್ಕೆ ತಿರುಗಿ ಪಿ.ಎಲ್.ಡಿ ಬ್ಯಾಂಕ್ ಹಾಗೂ ಲಯನ್ಸ್ ಕಲ್ಯಾಣ ಮಂದಿರದ ಹಿಂಬದಿಗೆ ಬಂದು ತಲುಪಿ ಅಲ್ಲಿಂದ ಬಲಕ್ಕೆ ತಿರುಗಿ ಗಂಡು ಮಕ್ಕಳ ಶಾಲೆಯ ಹಿಂಬದಿಯಿಂದ ಚಾಮರಾಜಪೇಟೆ ರಸ್ತೆಯನ್ನು ದಾಟಿಕೊಂಡು ಖಾಸಗಿ ಬಸ್ ನಿಲ್ದಾಣದ ಹಿಂಬದಿಯಿಂದ ಮುಖ್ಯರಸ್ತೆಯ ದಕ್ಷಿಣ ಭಾಗದ ಆಸ್ತಿಗಳ ಹಿಂಬದಿಗೆ ಬಂದು ತಲುಪುವುದು. ಅಲ್ಲಿಂದ ಪಶ್ಚಿಮಾಭಿಮುಖವಾಗಿ ಮುಖ್ಯರಸ್ತೆಯ ದಕ್ಷಿಣಭಾಗದ ಆಸ್ತಿಗಳ ಹಿಂಬದಿಯಲ್ಲೇ ಸಾಗುತ್ತಾ ಹಳೇ ಪೋಲೀಸ್ ಕ್ವಾಟ್ರಸ್ ಮುಖಾಂತರ ಗುಡಿಕೇರಿಯನ್ನು ಸೇರಿಕೊಂಡು ರಂಗನಾಥ ದೇವಸ್ಥಾನದ ಹಿಂಬದಿಯ ಆಸ್ತಿಗಳನ್ನು ಸೇರಿಸಿಕೊಂಡು ಪುನ: ಕುಮಟಾ ಕಡಮಡಿಗೆ ಮುಖ್ಯರಸ್ತೆಯನ್ನು ತಲುಪುವುದು.
		ಪಶ್ಚಿಮಕ್ಕೆ:	ವಾರ್ಡ್ ನಂ 6 & 7ರ ಗಡಿ	
		ಉತ್ತರಕ್ಕೆ:	ವಾರ್ಡ್ ನಂ 9, 16, 15ರ ಗಡಿ	
		ದಕ್ಷಿಣಕ್ಕೆ:	ವಾರ್ಡ್ ನಂ 9, 11 & 20ರ ಗಡಿ	
11	ವಾರ್ಡ್ ನಂ 11	**ಪೂರ್ವಕ್ಕೆ:**	ವಾರ್ಡ್ ನಂ 10ರ ಗಡಿ	ಈ ವಾರ್ಡಿನ ಉತ್ತರ ಗಡಿಯಾದ ಪಿ.ಎಲ್.ಡಿ ಬ್ಯಾಂಕ್ ರಸ್ತೆಯಿಂದ ಪ್ರಾರಂಭಗೊಂಡು, ರಸ್ತೆಯ ಪೂರ್ವಾಭಿಮುಖವಾಗಿ ಚಲಿಸುತ್ತಾ(ರಸ್ತೆಯ ಎಡ ಹಾಗೂ ಬಲಭಾಗದ ಆಸ್ತಿಗಳನ್ನು ಹೊರತುಪಡಿಸಿ) ಸೊರಬ–ಸಾಗರ ಮುಖ್ಯರಸ್ತೆಯನ್ನು ಬಂದು
		ಪಶ್ಚಿಮಕ್ಕೆ:	ವಾರ್ಡ್ ನಂ 09 & 12, 16ರ ಗಡಿ	
		ಉತ್ತರಕ್ಕೆ:	ವಾರ್ಡ್. ನಂ 16ರ ಗಡಿ	

		ದಕ್ಷಿಣಕ್ಕೆ:	ವಾರ್ಡ್ ನಂ 09ರ ಗಡಿ	ತಲುಪುವುದು. ಅಲ್ಲಿಂದ ಬಲಕ್ಕೆ ತಿರುಗಿ ಸಾಗರ–ಸೊರಬ ಮುಖ್ಯರಸ್ತೆಯಲ್ಲೇ ಸಾಗುತ್ತಾ(ಪಶ್ಚಿಮ ಭಾಗದ ಆಸ್ತಿಗಳನ್ನು ಒಳಗೊಂಡು)ಎ.ಪಿ.ಎಂ.ಸಿ ಹಾಗೂ ಆಸ್ಪತ್ರೆಯ ಮದ್ಯದ ರಸ್ತೆಯನ್ನು ತಲುಪಿ ಬಲಕ್ಕೆ ತಿರುಗಿ ಪಶ್ಚಿಮಾಭಿಮುಖವಾಗಿ ಚಲಿಸುತ್ತಾ ಕೋರ್ಟ್ ಮುಂಬದಿಗೆ ಬಂದು ತಲುಪುವುದು. ಅಲ್ಲಿಂದ ಬಲಕ್ಕೆ ತಿರುಗಿ ರಸ್ತೆಯಲ್ಲೇ ಸಾಗುತ್ತಾ, ಸ್ಟೇಡಿಯಂ ಮುಂಭಾಗಕ್ಕೆ ಬಂದು ತಲುಪಿ ಅಲ್ಲಿಂದ ಬಲಕ್ಕೆ ತಿರುಗಿ ಉತ್ತರಾಭಿಮುಖವಾಗಿ ಚಲಿಸಿ ಬಿ.ಸಿ.ಎಂ ಹಾಸ್ಟೇಲ್ ವೃತ್ತವನ್ನು ತಲುಪುವುದು ಅಲ್ಲಿಂದ ಬಲಕ್ಕೆ ತಿರುಗಿ ಪೂರ್ವಾಭಿಮುಖವಾಗಿ ಚಲಿಸಿ ಅಗ್ನಿಶಾಮಕ ಠಾಣೆ ಬಳಿಬಂದು ಎಡಕ್ಕೆ ತಿರುಗಿ ಸುಭಾಷ್ ನಗರ ರಸ್ತೆಯಲ್ಲಿ ಉತ್ತರಾಭಿಮುಖವಾಗಿ ಸಾಗುತ್ತಾ (ರಸ್ತೆಯ ಪಶ್ಚಿಮ ಭಾಗದ ಆಸ್ತಿಗಳ ಹೊರತುಪಡಿಸಿ) ಪಿ.ಎಲ್.ಡಿ ಬ್ಯಾಂಕ್ ರಸ್ತೆಯನ್ನು ತಲುಪುವುದು (ಅಬಕಾರಿ ಕಛೇರಿ ಹಿಂಬದಿ)
12	ವಾರ್ಡ್ ನಂ 12	**ಪೂರ್ವಕ್ಕೆ:**	ವಾರ್ಡ್ ನಂ 16ರ ಗಡಿ	ಕಾನಕೇರಿ ಮಹಬೂಬಿ ಮನೆಯ ಎದುರಿನ ರಸ್ತೆಯಿಂದ ಪ್ರಾರಂಭವಾಗಿ(ರಸ್ತೆಯ ಉತ್ತರಭಾಗದ ಆಸ್ತಿಗಳನ್ನು ಹೊರತುಪಡಿಸಿ) ಪೂರ್ವಾಭಿಮುಖವಾಗಿ ಚಲಿಸುತ್ತಾ ಟೆಲಿಫೋನ್ ಪರಮೇಶಿ ಮನೆ ಬಳಿ ಬಂದು ತಲುಪಿ ಅಲ್ಲಿಂದ ಬಲಕ್ಕೆ ತಿರುಗಿ ದಕ್ಷಿಣಾಭಿಮುಖವಾಗಿ ಸಾಗುತ್ತಾ ಅಗ್ನಿಶಾಮಕ ಠಾಣೆ ರಸ್ತೆಗೆ ಬಂದು ತಲುಪುವುದು. (ರಸ್ತೆಯ ಪೂರ್ವಭಾಗದ ಆಸ್ತಿಗಳನ್ನು ಹೊರತುಪಡಿಸಿ) ಅಲ್ಲಿಂದ ಬಲಕ್ಕೆ ತಿರುಗಿ ಪಶ್ಚಿಮಾಭಿಮುಖವಾಗಿ ಸಾಗುತ್ತಾ ಹೆಣ್ಣುಮಕ್ಕಳ ಹಾಸ್ಟೇಲ್ ಸರ್ಕಲ್ ಗೆ ಬಂದು ತಲುಪುವುದು. ಅಲ್ಲಿಂದ ಬಲಕ್ಕೆ ತಿರುಗಿ ಕಾನಕೇರಿ ಸಮುದಾಯ ಭವನ ರಸ್ತೆಯಲ್ಲಿ ಸಾಗುತ್ತಾ(ರಸ್ತೆಯ ಪಶ್ಚಿಮ ಭಾಗದ ಆಸ್ತಿಗಳ ಹಿಂಬದಿಯಿಂದ) ಖಯೂಂ ಮನೆ ಬಳಿ ಬಂದು ತಲುಪಿ ಅಲ್ಲಿಂದ ಎಡಕ್ಕೆ ತಿರುಗಿ ಪಶ್ಚಿಮಾಭಿಮುಖವಾಗಿ ಸಾಗುತ್ತಾ (ರಸ್ತೆಯ ದಕ್ಷಿಣ ಭಾಗದ ಆಸ್ತಿಗಳ ಹಿಂಬದಿಯಿಂದ) ಜಿ.ಎಸ್.ಎಲ್.ಆರ್ ಟ್ಯಾಂಕ್ ಗೆ ಹೋಗುವ ರಸ್ತೆಯ ಸರ್ಕಲ್ ಗೆ ಬಂದು ತಲುಪುವುದು. ಅಲ್ಲಿಂದ ಬಲಕ್ಕೆ ತಿರುಗಿ ಉತ್ತರಾಭಿಮುಖವಾಗಿ ಚಲಿಸಿ ಟ್ಯಾಂಕ್ ಪಕ್ಕದ ರಸ್ತೆಯಿಂದ ಹಾಗೆ ಮುಂದೆ ಉತ್ತರಾಭಿಮುಖವಾಗಿ ಸಾಗುತ್ತಾ ಮಹಬೂಬಿ ಮನೆಗೆ ಹೋಗುವ ರಸ್ತೆಯನ್ನು ತಲುಪುವುದು.
		ಪಶ್ಚಿಮಕ್ಕೆ:	ವಾರ್ಡ್ ನಂ 11ರ ಗಡಿ	
		ಉತ್ತರಕ್ಕೆ:	ವಾರ್ಡ್ ನಂ 11ರ ಗಡಿ	
		ದಕ್ಷಿಣಕ್ಕೆ:	ವಾರ್ಡ್ ನಂ 09, 13, 14ರ ಗಡಿ	
13	ವಾರ್ಡ್ ನಂ 13	**ಪೂರ್ವಕ್ಕೆ:**	ವಾರ್ಡ್ ನಂ 14ರ ಗಡಿ	ಕಾನಕೇರಿಯ ಕನ್ನಡ ಶಾಲೆಗೆ ಹೋಗುವ ರಸ್ತೆಯಿಂದ ಪ್ರಾರಂಭವಾಗಿ(ಶಬ್ಬೀರ್ ಮನೆ ರಸ್ತೆ ಕಡೆಯಿಂದ) ವೆಟರ್ನರಿ ಡಾಕ್ಟರ್ ಮನೆಯ ರಸ್ತೆಯ ಎಡ ಹಾಗೂ ಬಲಭಾಗದ ಆಸ್ತಿಗಳನ್ನು ಸೇರಿಸಿಕೊಂಡು ಟ್ಯಾಂಕ್ ರಸ್ತೆಯನ್ನು ಬಂದು ತಲುಪಿ ಅಲ್ಲಿಂದ ದಕ್ಷಿಣಾಭಿಮುಖವಾಗಿ ಚಲಿಸಿ(ಟ್ಯಾಂಕ್ ರಸ್ತೆಗೆ
		ಪಶ್ಚಿಮಕ್ಕೆ:	ವಾರ್ಡ್ ನಂ 09ರ ಗಡಿ	
		ಉತ್ತರಕ್ಕೆ:	ವಾರ್ಡ್ ನಂ 12ರ ಗಡಿ	
		ದಕ್ಷಿಣಕ್ಕೆ:	ವಾರ್ಡ್ ನಂ 20ರ ಗಡಿ	

				ಹೊಂದಿಕೊಂಡಿರುವ ಪಶ್ಚಿಮ ಭಾಗದ ಆಸ್ತಿಗಳನ್ನು ಹೊರತುಪಡಿಸಿ) ರಿಂಗ್ ಲೋಕೇಶನ ಮನೆ ಇರುವ ರಸ್ತೆಗೆ ಬಂದು ತಲುಪುವುದು. ಅಲ್ಲಿಂದ ಬಲಕ್ಕೆ ತಿರುಗಿ ರಿಂಗ್ ಲೋಕೇಶನ ಮನೆ ರಸ್ತೆಯ ಎಡ ಹಾಗೂ ಬಲಭಾಗದ ಆಸ್ತಿಗಳನ್ನು ಸೇರಿಸಿಕೊಂಡು ಪುನ: ಕನ್ನಡ ಶಾಲೆಗೆ ಹೋಗುವ ರಸ್ತೆಯನ್ನು ಬಂದು ತಲುಪುವುದು. ಅಲ್ಲಿಂದ ಎಡಕ್ಕೆ ತಿರುಗಿ ದಕ್ಷಿಣಾಭಿಮುಖವಾಗಿ ಚಲಿಸುತ್ತಾ ರಸ್ತೆಯ ಪೂರ್ವಭಾಗದ ಆಸ್ತಿಗಳನ್ನು ಹೊರತುಪಡಿಸಿ ರಾಧಾ ಸಿಸ್ಟರ್ ಮನೆ ಪಕ್ಕಕ್ಕೆ ಬಂದು ತಲುಪಿ, ಅಲ್ಲಿಂದ ಬಲಕ್ಕೆ ತಿರುಗಿ ಪಶ್ಚಿಮಾಭಿಮುಖವಾಗಿ ಸಾಗಿ ಮರೂರಿಗೆ ಹೋಗುವ ರಸ್ತೆಯನ್ನು ತಲುಪುವುದು. ಅಲ್ಲಿಂದ ಬಲಕ್ಕೆ ತಿರುಗಿ ಉತ್ತರಾಭಿಮುಖವಾಗಿ ಚಲಿಸುತ್ತಾ(ಮರೂರಿಗೆ ಹೋಗುವ ರಸ್ತೆಯ ಪೂರ್ವಭಾಗದ ಆಸ್ತಿಗಳನ್ನು ಹೊರುತಪಡಿಸಿ) ಗುರ್ಕಿ ಬಸಂತಪ್ಪನ ಮನೆಯ ಹಿಂಬದಿವರೆಗೆ ಬಂದು ತಲುಪುವುದು. ಅಲ್ಲಿಂದ ಬಲಕ್ಕೆ ತಿರುಗಿ ಪೂರ್ವಾಭಿಮುಖವಾಗಿ ಚಲಿಸುತ್ತಾ ರಸ್ತೆಯ ದಕ್ಷಿಣ ಭಾಗದ ಆಸ್ತಿಗಳನ್ನು ಹೊರುತುಪಡಿಸಿ ಕೊಡಕಣಿ ಬಸಣ್ಣನ ಅಂಗಡಿ ಹಿಂಭಾಗದವರೆಗೆ ಬಂದು ತಲುಪುವುದು(ಕನ್ನಡ ಶಾಲೆಯ ರಸ್ತೆ)
14	ವಾರ್ಡ್ ನಂ 14	**ಪೂರ್ವಕ್ಕೆ:**	ವಾರ್ಡ್ ನಂ 12ರ ಗಡಿ	ಕಾನಕೇರಿ ಪಾರ್ವತಿ ದೇವಸ್ಥಾನದ ರಸ್ತೆಯಿಂದ ಪ್ರಾರಂಭವಾಗಿ (ಮಾರುತಿ ಡ್ರಾಮಾಸೆಟ್ ರವರ ಮನೆ ವೃತ್ತ) ರಸ್ತೆಯ ದಕ್ಷಿಣ ಭಾಗದ ಆಸ್ತಿಗಳ ಹಿಂಬದಿಯಿಂದ ಪೂರ್ವಾಭಿಮುಖವಾಗಿ ಚಲಿಸುತ್ತಾ ಟ್ಯಾಂಕ್ ರಸ್ತೆಯನ್ನು ತಲುಪಿ ಅಲ್ಲಿಂದ ಬಲಕ್ಕೆ ತಿರುಗಿ ದಕ್ಷಿಣಾಭಿಮುಖವಾಗಿ ಚಲಿಸುತ್ತಾ, ಜಿ.ಎಲ್.ಎಸ್.ಆರ್ ಟ್ಯಾಂಕ್ ಬಳಿ ಬಂದು ತಲುಪುವುದು(ಟ್ಯಾಂಕನ್ನು ಹೊರತುಪಡಿಸಿ) ಟ್ಯಾಂಕ್ ಪಕ್ಕದ ರಸ್ತೆಯಲ್ಲಿ ಪಶ್ಚಿಮಾಭಿಮುಖವಾಗಿ ಸಾಗುತ್ತಾ (ರಸ್ತೆಯ ದಕ್ಷಿಣಭಾಗದ ಆಸ್ತಿಗಳ ಹಿಂಬದಿಯಲ್ಲೇ) ಕಾತುವಳ್ಳಿ ಮನೆಯ ಬಳಿಯ ವೃತ್ತವನ್ನು ತಲುಪಿ ಅಲ್ಲಿಂದ ಪುನ: ಪಶ್ಚಿಮಾಭಿಮುಖವಾಗಿ ರಸ್ತೆಯ ದಕ್ಷಿಣ ಭಾಗದ ಆಸ್ತಿಗಳ ಹಿಂಭಾಗದಲ್ಲೇ ಚಲಿಸುತ್ತಾ ಮರೂರಿಗೆ ಹೋಗುವ ರಸ್ತೆಗೆ ಬಂದು ತಲುಪುವುದು. ಅಲ್ಲಿಂದ ಬಲಕ್ಕೆ ತಿರುಗಿ ಉತ್ತರಾಭಿಮುಖವಾಗಿ ಚಲಿಸುತ್ತಾ (ಮರೂರು ರಸ್ತೆಗೆ ಹೊಂದಿಕೊಂಡಿರುವ ಆಸ್ತಿಗಳನ್ನು ಹೊರುತುಪಡಿಸಿ) ಮುದ್ದಪ್ಪ ಮಾಸ್ತರ್ ಮನೆ ಬಳಿ ಬಂದು ತಲುಪಿ ಅಲ್ಲಿಂದ ಬಲಕ್ಕೆ ತಿರುಗಿ ಪೂರ್ವಾಭಿಮುಖವಾಗಿ ಚಲಿಸುತ್ತಾ (ರಸ್ತೆಯ ದಕ್ಷಿಣ ಭಾಗದ ಆಸ್ತಿಗಳನ್ನು ಒಳಗೊಂಡು) ಮಸೀದಿ ಸರ್ಕಲ್ ಗೆ ಬಂದು ತಲುಪುವುದು. ಅಲ್ಲಿಂದ ಎಡಕ್ಕೆ ತಿರುಗಿ ಉತ್ತರಾಭಿಮುಖವಾಗಿ ಚಲಿಸಿ ಮಾರುತಿ ಡ್ರಾಮಾ ಸೆಟ್ ರವರ ಮನೆ ಹಿಂಬದಿಗೆ ಬಂದು ತಲುಪುವುದು.
		ಪಶ್ಚಿಮಕ್ಕೆ:	ವಾರ್ಡ್ ನಂ 20ರ ಗಡಿ	
		ಉತ್ತರಕ್ಕೆ:	ವಾರ್ಡ್ ನಂ 13ರ ಗಡಿ	
		ದಕ್ಷಿಣಕ್ಕೆ:	ವಾರ್ಡ್ ನಂ 15 ಹಾಗೂ 16ರ ಗಡಿ	

15	ವಾರ್ಡ್ ನಂ 15	**ಪೂರ್ವಕ್ಕೆ:**	ವಾರ್ಡ್ ನಂ 17ರ ಗಡಿ	ಸೊರಬ–ಸಾಗರ ಮುಖ್ಯರಸ್ತೆಯ (ಮರೂರಿಗೆ ಹೋಗುವ ಕ್ರಾಸ್ ನಿಂದ ಪ್ರಾರಂಭವಾಗಿ)ದಕ್ಷಿಣ ಭಾಗದ ಆಸ್ತಿಗಳ ಹಿಂಬದಿಯಲ್ಲಿ ಚಲಿಸುತ್ತಾ, ಪ್ರಕಾಶ್ ಟ್ರೇಡರ್ ಅಂಗಡಿ ವರೆಗೆ ಬಂದು ತಲುಪಿ ಅಲ್ಲಿಂದ ಬಲಕ್ಕೆ ತಿರುಗಿ ದಕ್ಷಿಣಾಭಿಮುಖವಾಗಿ ಚಲಿಸುತ್ತಾ, ಸ್ವಾಮಿ ವಿವೇಕಾನಂದ ಶಾಲೆಯ ಕ್ರಾಸ್ ವರೆಗೂ ಬಂದು ತಲುಪುವುದು. (ರಸ್ತೆಯ ಪೂರ್ವಭಾಗದ ಆಸ್ತಿಗಳನ್ನು ಹೊರುತಡಿಸಿ) ಅಲ್ಲಿಂದ ಪುನಃ ದಕ್ಷಿಣಾಭಿಮುಖವಾಗಿ ಅದೇ ರಸ್ತೆಯಲ್ಲಿ ಸಾಗುತ್ತಾ ರಸ್ತೆಯ ಎಡ ಹಾಗೂ ಬಲಭಾಗದ ಆಸ್ತಿಗಳನ್ನು ಮಾತ್ರ ಸೇರಿಸಿಕೊಂಡು ಮಸೀದಿ ರಸ್ತೆಗೆ ಬಂದು ತಲುಪುವುದು. ಅಲ್ಲಿಂದ ಬಲಕ್ಕೆ ತಿರುಗಿ ಪಶ್ಚಿಮಾಭಿಮುಖವಾಗಿ ಸಾಗುತ್ತಾ ಮರೂರಿಗೆ ಹೋಗುವ ರಸ್ತೆಯನ್ನು ತಲುಪುವುದು(ಮುದ್ದಪ್ಪ ಮಾಸ್ಟರ್ ಮನೆಯ ಸರ್ಕಲ್ ತನಕ) ಅಲ್ಲಿಂದ ಬಲಕ್ಕೆ ತಿರುಗಿ ರಸ್ತೆಯ ಉತ್ತರಾಭಿಮುಖವಾಗಿ ಚಲಿಸುತ್ತಾ(ಮರೂರು ರಸ್ತೆಯ ಪೂರ್ವ ಭಾಗದ ಆಸ್ತಿಗಳನ್ನು ಹೊರುತುಪಡಿಸಿ) ಬಸ್ ಏಜೆಂಟ್ ಪ್ರಭು ಮನೆ ಸರ್ಕಲ್ ಗೆ ಬಂದು ತಲುಪವುದು. ಅಲ್ಲಿಂದ ಬಲಕ್ಕೆ ತಿರುಗಿ ಪೂರ್ವಾಭಿಮುಖವಾಗಿ ಚಲಿಸುತ್ತಾ (ರಸ್ತೆಯ ಉತ್ತರ ಭಾಗದ ಆಸ್ತಿಗಳನ್ನು ಹೊರುತಪಡಿಸಿ)ಕಾನಕೇರಿ ಟವರ್ ಬಳಿ ಬಂದು ತಲುಪುವುದು. ಅಲ್ಲಿಂದ ಎಡಕ್ಕೆ ತಿರುಗಿ ರಸ್ತೆಯ ಎಡ ಹಾಗೂ ಬಲಭಾಗದ ಆಸ್ತಿಗಳನ್ನು ಸೇರಿಸಿಕೊಂಡು ವಿವೇಕಾನಂದ ಶಾಲೆ ಸರ್ಕಲ್ ಗೆ ಬಂದು ತಲುಪಿ ಅಲ್ಲಿಂದ ಎಡಕ್ಕೆ ತಿರುಗಿ ರಸ್ತೆಯಲ್ಲಿ ಪಶ್ಚಿಮಾಭಿಮುಖವಾಗಿ ಸಾಗುತ್ತಾ (ರಸ್ತೆಯ ದಕ್ಷಿಣಭಾಗದ ಆಸ್ತಿಗಳನ್ನು ಒಳಗೊಂಡು) ಮರೂರು ರಸ್ತೆಗೆ ಬಂದು ತಲುಪಿ ಅಲ್ಲಿಂದ ಬಲಕ್ಕೆ ತಿರುಗಿ ಉತ್ತರಾಭಿಮುಖವಾಗಿ ಚಲಿಸಿ ಸೊರಬ–ಸಿರಸಿ ಮುಖ್ಯರಸ್ತೆಯನ್ನು ತಲುಪುವುದು.
		ಪಶ್ಚಿಮಕ್ಕೆ:	ವಾರ್ಡ್ ನಂ 14ರ ಗಡಿ	
		ಉತ್ತರಕ್ಕೆ:	ವಾರ್ಡ್ ನಂ 16ರ ಗಡಿ	
		ದಕ್ಷಿಣಕ್ಕೆ:	ವಾರ್ಡ್ ನಂ 20ರ ಗಡಿ	
16	ವಾರ್ಡ್ ನಂ 16	**ಪೂರ್ವಕ್ಕೆ:**	ವಾರ್ಡ್ ನಂ 17ರ ಗಡಿ	ಸೊರಬ ಮುಖ್ಯರಸ್ತೆಯ(ಪ್ರಕಾಶ್ ಟ್ರೇಡರ್ ಕ್ರಾಸ್ ನಿಂದ) ದಕ್ಷಿಣ ಭಾಗದ ಆಸ್ತಿಗಳ ಹಿಂಬದಿಯಿಂದ ಪೂರ್ವಾಭಿಮುಖವಾಗಿ ಚಲಿಸುತ್ತಾ, ಖಾಸಗಿ ಬಸ್ ನಿಲ್ದಾಣದ ಹಿಂಬದಿ ಬಂದು ತಲುಪಿ ಅಲ್ಲಿಂದ ಚಾಮರಾಜಪೇಟೆ ರಸ್ತೆಯನ್ನು ದಾಟಿಕೊಂಡು ಗಂಡು ಮಕ್ಕಳ ಶಾಲೆ ಹಾಗೂ ಲಯನ್ಸ್ ಕಲ್ಯಾಣ ಮಂದಿರದ ಹಿಂಬದಿವರೆಗೆ ಬಂದು ತಲುಪುವುದು. ಅಲ್ಲಿಂದ ಎಡಕ್ಕೆ ತಿರುಗಿ(ಲಯನ್ಸ್ ಕಲ್ಯಾಣ ಮಂದಿರ ಹಾಗೂ ಪಿ.ಎಲ್.ಡಿ ಬ್ಯಾಂಕ್ ಮಧ್ಯಭಾಗದಿಂದ) ಸಾಗರ–ಸೊರಬ ಮುಖ್ಯರಸ್ತೆಯನ್ನು ಬಂದು ತಲುಪುವುದು. ಅಲ್ಲಿಂದ ರಾಘವೇಂದ್ರ ಬಡಾವಣೆ ರಸ್ತೆಯಲ್ಲಿ ಪಶ್ಚಿಮಾಭಿಮುಖವಾಗಿ ಚಲಿಸುತ್ತಾ(ರಸ್ತೆಯ ಎಡ ಹಾಗೂ ಬಲ ಭಾಗದ ಆಸ್ತಿಗಳನ್ನು ಒಳಗೊಂಡು) ಸರ್ಕಾರಿ ಹೆಣ್ಣುಮಕ್ಕಳ
		ಪಶ್ಚಿಮಕ್ಕೆ:	ವಾರ್ಡ್ ನಂ 11, 12 ಮತ್ತು 14ರ ಗಡಿ	
		ಉತ್ತರಕ್ಕೆ:	ವಾರ್ಡ್ ನಂ 11 ಮತ್ತು 10 ಗಡಿ	
		ದಕ್ಷಿಣಕ್ಕೆ:	ವಾರ್ಡ್ ನಂ 15ರ ಗಡಿ	

				ಶಾಲೆಯ ವೃತ್ತದ ಬಳಿ ಎಡಕ್ಕೆ ತಿರುಗಿ ರಸ್ತೆಯಲ್ಲೇ ದಕ್ಷಿಣಾಭಿಮುಖವಾಗಿ ಸಾಗುತ್ತಾ(ರಸ್ತೆಯ ಪೂರ್ವ ಭಾಗದ ಆಸ್ತಿಗಳನ್ನು ಹೊರುತಪಡಿಸಿ) ಟೆಲಿಫೋನ್ ಪರಮೇಶಿ ಮನೆ ಬಳಿ ಬಂದು ಬಲಕ್ಕೆ ತಿರುಗಿ ಪಶ್ಚಿಮಾಭಿಮುಖವಾಗಿ ರಸ್ತೆಯಲ್ಲೇ ಸಾಗುತ್ತಾ (ಮಹಬೂಬಿ ಮನೆ ರಸ್ತೆಯ ದಕ್ಷಿಣ ಭಾಗದ ಆಸ್ತಿಗಳನ್ನು ಹೊರತುಪಡಿಸಿ) ರುದ್ರಗೌಡರ ಮನೆಯ ಹಿಂಬದಿ ಬಂದು ಜಿ.ಎಲ್.ಎಸ್.ಆರ್ ಟ್ಯಾಂಕ್ ರಸ್ತೆಯನ್ನು ತಲುಪಿ ಅಲ್ಲಿಂದ ಬಲಕ್ಕೆ ತಿರುಗಿ ಉತ್ತರಾಭಿಮುಖವಾಗಿ ಚಲಿಸಿ ಪಾರ್ವತಿ ದೇವಸ್ಥಾನದ ರಸ್ತೆಯ ಕಡೆಗೆ ತಿರುಗುವುದು.(ಪಾರ್ವತಿ ದೇವಸ್ಥಾನದ ರಸ್ತೆಯ ಎಡ ಹಾಗೂ ಬಲ ಭಾಗದ ಆಸ್ತಿಗಳು ಸೇರಿಸಿಕೊಂಡು) ಅಲ್ಲಿಂದ ಪಶ್ಚಿಮಾಭಿಮುಖವಾಗಿ ರಸ್ತೆಯಲ್ಲೇ ಸಾಗುತ್ತಾ ಮಾರುತಿ ಡ್ರಾಮಾಸೆಟ್ ರವರ ಮನೆಯ ವೃತ್ತಕ್ಕೆ ಬಂದು ತಲುಪುವುದು. ಅಲ್ಲಿಂದ ಬಲಕ್ಕೆ ತಿರುಗಿ ಉತ್ತರಾಭಿಮುಖವಾಗಿ ಚಲಿಸುತ್ತಾ (ರಸ್ತೆಗೆ ಹೊಂದಿಕೊಂಡಿರುವ ಆಸ್ತಿಗಳನ್ನು ಹೊರುತುಪಡಿಸಿ) ಸ್ವಾಮಿ ವಿವೇಕಾನಂದ ಶಾಲೆಯ ಸರ್ಕಲ್ ಗೆ ಬಂದು ತಲುಪುವುದು. ಅಲ್ಲಿಂದ ಹಾಗೆ ಪುನ: ಉತ್ತರಭಿಮುಖವಾಗಿ ಚಲಿಸುತ್ತಾ(ರಸ್ತೆಯ ಪೂರ್ವಭಾಗದ ಆಸ್ತಿಗಳನ್ನು ಸೇರಿಸಿಕೊಂಡು)ಸೊರಬ ಸಿರಸಿ ಮುಖ್ಯರಸ್ತೆಯನ್ನು ಬಂದು ತಲುಪುವುದು(ಪ್ರಕಾಶ್ ಟ್ರೇಡರ್ ಅಂಗಡಿ ರಸ್ತೆ)
17	ವಾರ್ಡ್ ನಂ 17	**ಪೂರ್ವಕ್ಕೆ:**	ಉದ್ರಿ ರಸ್ತೆ	ಈ ವಾರ್ಡ್ ಕೆ.ಕೆ ರಸ್ತೆಯ ಉತ್ತರ ಭಾಗದ ಆಸ್ತಿಗಳನ್ನು ಮಾತ್ರ ಒಳಗೊಂಡಿರುತ್ತದೆ(ಪಶ್ಚಿಮ ದಿಕ್ಕಿಗೆ ಚಿಕ್ಕಪೇಟೆ ರಸ್ತೆಯ ಬಳಿ ಮುಖ್ಯರಸ್ತೆಗೆ ಹೊಂದಿಕೊಂಡಿರುವ ಆಸ್ತಿಗಳು)ಪೂರ್ವದ ಕಡೆಗೆ ಉದ್ರಿ ರಸ್ತೆಯ ತನಕ ಮಾತ್ರ ಇರುವ ಆಸ್ತಿಗಳು)
		ಪಶ್ಚಿಮಕ್ಕೆ:	ಮಡಿವಾಳರ ಕೇರಿ	
		ಉತ್ತರಕ್ಕೆ:	ವಾರ್ಡ್ ನಂ 18 ಮತ್ತು 4ರ ಗಡಿ	
		ದಕ್ಷಿಣಕ್ಕೆ:	ಸೊರಬ-ಸಿರಸಿ ಮುಖ್ಯರಸ್ತೆ	
18	ವಾರ್ಡ್ ನಂ 18	**ಪೂರ್ವಕ್ಕೆ:**	ವಾರ್ಡ್ ನಂ 3ರ ಗಡಿ	ಗುರುಮಂದಿರ ರಸ್ತೆಯಿಂದ ಪ್ರಾರಂಭಗೊಂಡು ರಸ್ತೆಯ ಎಡ ಹಾಗೂ ಬಲಭಾಗಗಳ ಆಸ್ತಿಗಳನ್ನು ಒಳಗೊಂಡು ಪೂರ್ವಾಭಿಮುಖವಾಗಿ ಚಲಿಸಿ ಮಾರ್ಕೆಟ್ ರಸ್ತೆಯನ್ನು ಬಂದು ತಲುಪುವುದು. ಅಲ್ಲಿಂದ ಬಲಕ್ಕೆ ತಿರುಗಿ ದಕ್ಷಿಣಾಭಿಮುಖವಾಗಿ ಚಲಿಸುತ್ತಾ(ಮಾರ್ಕೆಟ್ ರಸ್ತೆಯ ಪಶ್ಚಿಮ ಭಾಗದ ಆಸ್ತಿಗಳ ಹಿಂಬದಿ) ಬ್ರಹ್ಮಕುಮಾರಿ ರಸ್ತೆಯನ್ನು ತಲುಪಿ ಅಲ್ಲಿಂದ ಬಲಕ್ಕೆ ತಿರುಗಿ ರಸ್ತೆಯ ಎಡ ಹಾಗೂ ಬಲಭಾಗದ ಆಸ್ತಿಗಳನ್ನು ಸೇರಿಸಿಕೊಂಡು, ಆನೆಮುಡಿಕೆ ರಸ್ತೆಯನ್ನು ತಲುಪುವುದು. ಅಲ್ಲಿಂದ ಸೊರಬ–ಮುಖ್ಯರಸ್ತೆಯ ಉತ್ತರಭಾಗದ ಆಸ್ತಿಗಳ ಹಿಂಬಂದಿಯಲ್ಲಿ ಹಾಗೆ ಮುಂದೆ ಸಾಗುತ್ತಾ (ನಾಮದೇವಗಲ್ಲಿ ರಸ್ತೆಯನ್ನು ಒಳಗೊಂಡು) ಚಿಕ್ಕಪೇಟೆ ಬಳಿ ಬಂದು
		ಪಶ್ಚಿಮಕ್ಕೆ:	ವಾರ್ಡ್ ನಂ 20ರ ಗಡಿ	
		ಉತ್ತರಕ್ಕೆ:	ವಾರ್ಡ್ ನಂ 3ರ ಗಡಿ	
		ದಕ್ಷಿಣಕ್ಕೆ:	ವಾರ್ಡ್ ನಂ 17ರ ಗಡಿ	

				ತಲುಪುವುದು. (ಚಿಕ್ಕಪೇಟೆ ರಸ್ತೆಯ ಎಡ ಹಾಗೂ ಬಲ ಭಾಗದ ಆಸ್ತಿಗಳನ್ನು ಒಳಗೊಂಡು) ಅಲ್ಲಿಂದ ಎಡಕ್ಕೆ ತಿರುಗಿ(ಸೊಪ್ಪಿನಕೇರಿ ಪಕ್ಕದ ಓಣಿ) ಫೈನಾನ್ಸ್ ಮಂಜಪ್ಪರವರ ಆಸ್ತಿಗಳನ್ನು ಸೇರಿಸಿಕೊಂಡು ಗುರುಮಂದಿರ ಕೇರಿಗೆ ಬಂದು ತಲುಪುವುದು.
19	ವಾರ್ಡ್ ನಂ 19	**ಪೂರ್ವಕ್ಕೆ:**	ವಾರ್ಡ್ ನಂ 3ರ ಗಡಿ	ರೇಡಿಯನ್ಸ್ ಶಾಲೆಯಿಂದ ಪ್ರಾರಂಭವಾಗಿ ಸ.ನಂ 17ರ ಗಡಿಯಂಚಿನಲ್ಲಿ ಪೂರ್ವಾಭಿಮುಖವಾಗಿ ಚಲಿಸುತ್ತಾ, ಮಾರ್ಕೆಟ್ ರಸ್ತೆಯ ಪಶ್ಚಿಮದಿಕ್ಕಿನ ಆಸ್ತಿಗಳ ಹಿಂಬದಿಗೆ ಬಂದು ತಲುಪಿ ಅಲ್ಲಿಂದ ಬಲಕ್ಕೆ ತಿರುಗಿ ದಕ್ಷಿಣಾಭಿಮುಖವಾಗಿ ಚಲಿಸುತ್ತಾ, ಮಸೀದಿಕೇರಿಯ ಉತ್ತರ ಭಾಗದ ಆಸ್ತಿಗಳ ಹಿಂಬದಿಯನ್ನು ಬಂದು ತಲುಪುವುದು. ಅಲ್ಲಿಂದ ಬಲಕ್ಕೆ ತಿರುಗಿ ಪಶ್ಚಿಮಾಭಿಮುಖವಾಗಿ ಚಲಿಸುತ್ತಾ ಡಿಷ್ ಭಾಷಾ ಮನೆ ಹಿಂಬದಿ ಬಂದು ತಲುಪುವುದು ಹಾಗೇ ಮುಂದೆ ಸಾಗುತ್ತಾ (ಮಠದ ರಸ್ತೆಯ ಉತ್ತರ ಭಾಗದ ಆಸ್ತಿಗಳ ಹಿಂಬದಿಯಲ್ಲಿ)ಮಠದ ಜಾಗವನ್ನು ಸೇರಿಸಿಕೊಂಡು ರೇಡಿಯನ್ಸ್ ಶಾಲೆಯನ್ನು ತಲುಪುವುದು.
		ಪಶ್ಚಿಮಕ್ಕೆ:	ವಾರ್ಡ್ ನಂ 20 ಗಡಿ	
		ಉತ್ತರಕ್ಕೆ:	ವಾರ್ಡ್ ನಂ 20ರ ಗಡಿ	
		ದಕ್ಷಿಣಕ್ಕೆ:	ವಾರ್ಡ್ ನಂ 3ರ ಗಡಿ	
20	ವಾರ್ಡ್ ನಂ 20	**ಪೂರ್ವಕ್ಕೆ:**	ವಾರ್ಡ್ ನಂ 9, 13,14,15,1 7,18 & 3ರ ಗಡಿ	ಈ ವಾರ್ಡ್ ಉತ್ತರ ದಿಕ್ಕಿನಲ್ಲಿ ದಂಡಾವತಿ ಹೊಳೆಯಿಂದ ಸ.ನಂ 17ರ ಬಳಿ ಪ್ರಾರಂಭವಾಗಿ ಅಲ್ಲಿಂದ ಹೊಳೆಯ ಸೇತುವೆ ಮುಖಾಂತರ ವಾರ್ಡ್ ನಂ 3ರ ಪಶ್ಚಿಮದ ಗಡಿಯ ಮುಖಾಂತರ ದಕ್ಷಿಣ ದಿಕ್ಕಿಗೆ ಸಾಗುತ್ತಾ, ವಾರ್ಡ್ ನಂ 19ರ ಉತ್ತರದ ಗಡಿಯನ್ನು ಬಂದು ತಲುಪಿ ಅಲ್ಲಿಂದ ಉತ್ತರದ ಗಡಿಯಲ್ಲೇ ಪಶ್ಚಿಮಾಭಿಮುಖವಾಗಿ ಸಾಗುತ್ತಾ ಮಠದ ಭಾಗವನ್ನು ತಲುಪುವುದು. (ಮಠದ ಜಾಗವನ್ನು ಹೊರತುಪಡಿಸಿ) ಮಠದ ಜಾಗದ ಹಿಂಬದಿಯಿಂದ ಬಾಲಿಕಾ ಪ್ರೌಢಶಾಲೆಯನ್ನು ಹೊರತುಪಡಿಸಿ ಫೈನಾನ್ಸ್ ಮಂಜಪ್ಪರವರ ಮನೆಯ ಓಣಿ ಮುಖಾಂತರ ಚಿಕ್ಕಪೇಟೆ ರಸ್ತೆಗೆ ಬಂದು ತಲುಪುವುದು. (ಸೊಪ್ಪಿನಕೇರಿ ಹಾಗೂ ಉಪ್ಪಾರಕೇರಿ ಒಳಗೊಂಡಂತೆ) ಅಲ್ಲಿಂದ ಸೊರಬ ಸಿರಸಿ ಮುಖ್ಯರಸ್ತೆಯನ್ನು ದಾಟಿಕೊಂಡು ಮಡಿವಾಳ ಕೇರಿಯನ್ನು ಸೇರಿಸಿಕೊಂಡು (ರಂಗನಾಥ ದೇವಸ್ಥಾನದ ಹಿಂಬದಿಯ ಆಸ್ತಿಗಳ ಹೊರುತುಪಡಿಸಿ) ಗುಡಿಕೇರಿಯ ಎಡ ಹಾಗೂ ಬಲಭಾಗದ ಆಸ್ತಿಗಳನ್ನು ಹೊರತುಪಡಿಸಿ ಹಳೇ ಪೋಲೀಸ್ ಕ್ವಾಟ್ರಸ್ ಬಳಿ ಬಂದು ತಲುಪವುದು. ಅಲ್ಲಿಂದ ಬಲಕ್ಕೆ ತಿರುಗಿ ಪಶ್ಚಿಮಾಭಿಮುಖವಾಗಿ ಸಾಗುತ್ತಾ ಗುರುಭವನ ರಸ್ತೆಯನ್ನು ತಲುಪಿ ಅಲ್ಲಿಂದ ಎಡಕ್ಕೆ ತಿರುಗಿ ಪೂರ್ವಾಭಿಮುಖವಾಗಿ ಚಲಿಸುತ್ತಾ(ರಾಘವೇಂದ್ರ ಬಡಾವಣೆ ರಸ್ತೆಯ ದಕ್ಷಿಣ ಭಾಗದ ಆಸ್ತಿಗಳ ಹಿಂಭಾಗದಲ್ಲಿ ಚಲಿಸುತ್ತಾ) ಹಳೇ ಲೈಬ್ರರಿ ಕಟ್ಟಡದ ಹಿಂಬದಿ ಬಂದು ತಲುಪವುದು. ಅಲ್ಲಿಂದ ಬಲಕ್ಕೆ ತಿರುಗಿ(ಮಸೀದಿ
		ಪಶ್ಚಿಮಕ್ಕೆ:	ದಂಡಾವತಿ ಹೊಳೆ	
		ಉತ್ತರಕ್ಕೆ:	ದಂಡಾವತಿ ಹೊಳೆ	
		ದಕ್ಷಿಣಕ್ಕೆ:	ವಾರ್ಡ್ ನಂ 09ರ ಗಡಿ	

				ರಸ್ತೆಯ/ಮಾರುತಿ ಡ್ರಾಮ ಸೆಟ್ ಮನೆ ರಸ್ತೆ) ಟವರ್ ನ ಹಿಂಬದಿ ಬಂದುತಲುಪಿ, ಅಲ್ಲಿಂದ ಬಲಕ್ಕೆ ತಿರುಗಿ ಪಶ್ಚಿಮಾಭಿಮುಖವಾಗಿ ಸಾಗುತ್ತಾ ಮರೂರು ರಸ್ತೆಯನ್ನು ತಲುಪುವುದು. ಅಲ್ಲಿಂದ ಎಡಕ್ಕೆ ತಿರುಗಿ ಮರೂರು ರಸ್ತೆಯ ಪೂರ್ವಭಾಗದ ಆಸ್ತಿಗಳನ್ನು ಒಳಗೊಂಡು ಪಶ್ಚಿಮ ದಿಕ್ಕಿನಲ್ಲಿ ಸಾಗುತ್ತಾ ಸ.ನಂ 13ರ ಗಡಿಯನ್ನು ತಲುಪಿ ಅಲ್ಲಿಂದ ಬಲಕ್ಕೆ ತಿರುಗಿ ಪಶ್ಚಿಮಾಭಿಮುಖವಾಗಿ ಚಲಿಸುತ್ತಾ(ಸ.ನಂ 13 ಮತ್ತು 12ರ ದಕ್ಷಿಣ ಗಡಿಯಂಚಿನಲ್ಲಿ) ದಂಡಾವತಿ ಹೊಳೆಯ ದಂಡೆಯ ಅಂಚನ್ನು ತಲುಪುವುದು.
21	ವಾರ್ಡ್ ನಂ 21	**ಪೂರ್ವಕ್ಕೆ:**	ದಂಡಾವತಿ ಹೊಳೆ ದಂಡೆ	ಸೊರಬ–ಶಿರಸಿ ರಸ್ತೆಯ (ಜಯಂತಿ ಗ್ರಾಮದ ಎದುರು)ರಲ್ಲಿರುವ ಗಣಪತಿ ದೇವಸ್ಥಾನದಿಂದ ಪ್ರಾರಂಭವಾಗಿ ಸೊರಬ–ಸಿರಸಿ ರಸ್ತೆಯಲ್ಲಿ ಸೊರಬದ ಕಡೆಗೆ ಚಲಿಸುತ್ತಾ ಸ.ನಂ೧49ರ ಪ್ರಾರಂಭದ ಬಿಂದುವನ್ನು ತಲುಪಿ ಅಲ್ಲಿಂದ ಸ.ನಂ 149 ಮತ್ತು 148ರ ಉತ್ತರದ ಗಡಿ ಅಂಚಿನಲ್ಲೇ ಪೂರ್ವ ದಿಕ್ಕಿಗೆ ಚಲಿಸುತ್ತಾ, ದಂಡಾವತಿ ಹೊಳೆಯ ಅಂಚನ್ನು ಬಂದು ತಲುಪುವುದು. ಅಲ್ಲಿಂದ ಬಲಕ್ಕೆ ತಿರುಗಿ ದಕ್ಷಿಣಾಭಿಮುಖವಾಗಿ ಹೊಳೆಯಂಚಿನಲ್ಲೇ ಸಾಗುತ್ತಾ(.ಸ.ನಂ.148, 151, 152, 155, 156, 25, 24 ಹಾಗೂ 23ರ ಪೂರ್ವಭಾಗದ ಗಡಿಅಂಚು) ಅಲ್ಲಿಂದ ಬಲಕ್ಕೆ ತಿರುಗಿ ಸ.ನಂ 23ರ ದಕ್ಷಿಣದ ಗಡಿಅಂಚಿನಲ್ಲಿ ಸಾಗಿ ಬಂದು ಸೊರಬ–ಸಾಗರ ಮುಖ್ಯ ರಸ್ತೆಯನ್ನು ಬಂದು ತಲುಪಿ ಅಲ್ಲಿಂದ ಉತ್ತರಾಭಿಮುಖವಾಗಿ ಚಲಿಸಿ ಸ.ನಂ 176ರಲ್ಲಿನ ಕೆರೆಯ ದಕ್ಷಿಣದ ಗಡಿಅಂಚಿನಲ್ಲಿ ಪಶ್ಚಿಮಾಭಿಮುಖವಾಗಿ ಸಾಗುತ್ತಾ, ಪುರಸಭೆಯ ಜಲಶುದ್ದೀಕರಣ ಘಟಕವನ್ನು ಒಳಗೊಂಡು ಸರ್ವೆ ನಂ 175ನ್ನು ಬಂದು ತಲುಪುವುದು. ಅಲ್ಲಿಂದ ಮತ್ತೆ ಸ.ನಂ 175ರ ಗಡಿಯಲ್ಲೇ ಸಾಗುತ್ತಾ (ಸ.ನಂ 175ನ್ನು ಒಳಗೊಂಡು) ಪಂಚಾಯಿತಿ ಪಕ್ಕದ ರಸ್ತೆಗೆ ಬಂದು ತಲುಪಿ ಅಲ್ಲಿಂದ ಎಡಕ್ಕೆ ತಿರುಗಿ ಉತ್ತರಾಭಿಮುಖವಾಗಿ ಚಲಿಸುತ್ತಾ ಸೊರಬ–ಸಿದ್ದಾಪುರ ಮುಖ್ಯರಸ್ತೆಗೆ ತಲುಪುವುದು. ಅಲ್ಲಿಂದ ಬಲಕ್ಕೆ ತಿರುಗಿ ಸೊರಬದ ಕಡೆಗೆ ಸಾಗುತ್ತಾ ,ಓಂ ಪ್ರಕಾಶ್ ಮನೆಯ ರಸ್ತೆಯ ಬಳಿ ಎಡಕ್ಕೆ ತಿರುಗಿ ಉತ್ತರಾಭಿಮುಖವಾಗಿ ಚಲಿಸಿ ಅದೇ ರಸ್ತೆಯಲ್ಲಿ ಸಾಗುತ್ತಾ, ಗೋಪಾಲ ವಕೀಲರ ಮನೆಯ ಮುಖಾಂತರ ಗಣಪತಿ ದೇವಸ್ಥಾನದ ರಸ್ತೆಗೆ ಬಂದು ತಲುಪುವುದು.
		ಪಶ್ಚಿಮಕ್ಕೆ:	ವಾರ್ಡ್ ನಂ 02ರ ಗಡಿ	
		ಉತ್ತರಕ್ಕೆ:	ವಾರ್ಡ್ ನಂ 02ರ ಗಡಿ	
		ದಕ್ಷಿಣಕ್ಕೆ:	ವಾರ್ಡ್ ನಂ 22ರ ಗಡಿ	
22	ವಾರ್ಡ್ ನಂ 22	**ಪೂರ್ವಕ್ಕೆ:**	ದಂಡಾವತಿ ಹೊಳೆ	ಹಳೇ ಸೊರಬ ವ್ಯಾಪ್ತಿಯ ಸರ್ವೆ ನಂ 176ರಲ್ಲಿರುವ ಕೆರೆಯ ದಕ್ಷಿಣ ಭಾಗದ ಗಡಿಅಂಚಿನಿಂದ ಪ್ರಾರಂಭವಾಗಿ ಪೂರ್ವಾಭಿಮುಖವಾಗಿ ಸಾಗುತ್ತಾ, ಸೊರಬ–ಸಾಗರ ಮುಖ್ಯರಸ್ತೆಯನ್ನು ತಲುಪಿ ಅಲ್ಲಿಂದ ಸಾಗರದ ಕಡೆಗೆ ಚಲಿಸಿ
		ಪಶ್ಚಿಮಕ್ಕೆ:	ಪುರಸಭೆಯ ಸರಹದ್ದು	
		ಉತ್ತರಕ್ಕೆ:	ವಾರ್ಡ್ ನಂ 2 & 21ರ ಗಡಿ	

		ದಕ್ಷಿಣಕ್ಕೆ:	ವಾರ್ಡ್ ನಂ 23ರ ಗಡಿ	ಸ.ನಂ.298ರ ಬಳಿ ಎಡಕ್ಕೆ ತಿರುಗಿ ಪೂರ್ವಾಭಿಮುಖವಾಗಿ ಚಲಿಸುತ್ತಾ ಸ.ನಂ 298 ಹಾಗೂ 157ರ ಉತ್ತರದ ಗಡಿಅಂಚಿನಲ್ಲೇ ಸಾಗುತ್ತಾ, ದಂಡಾವತಿ ಹೊಳೆಯನ್ನು ತಲುಪುವುದು. ಅಲ್ಲಿಂದ ಹೊಳೆಯ ದಂಡೆಯ ಅಂಚಿನಲ್ಲೇ ದಕ್ಷಿಣಾಭಿಮುಖವಾಗಿ ಸಾಗುತ್ತಾ, (ಸ.ನಂ.157,158,159,160 ಪೂರ್ವಾಭಾಗದ ಗಡಿ ಅಂಚು) 160ರ ದಕ್ಷಿಣದ ಗಡಿಅಂಚನ್ನು ತಲುಪಿ ಅಲ್ಲಿಂದ ಬಲಕ್ಕೆ ತಿರುಗಿ ಪಶ್ಚಿಮಾಭಿಮುಖವಾಗಿ ಸಾಗುತ್ತಾ(ಸ.ನಂ 101ರ ಉತ್ತರದ ಗಡಿಯಂಚು) ಸೊರಬ–ಸಾಗರ ಮುಖ್ಯರಸ್ತೆಯನ್ನು ತಲುಪುವುದು. ಹಾಗೆಯೇ ಪಶ್ಚಿಮಾಭಿಮುಖವಾಗಿ ಸ.ನಂ 100ರ ಉತ್ತರದ ಗಡಿಅಂಚಿನಲ್ಲೇ ಸಾಗುತ್ತಾ (ನಡಹಳ್ಳಿ ಗ್ರಾಮದ ಗಡಿಅಂಚಿನಲ್ಲೇ ಸಾಗುತ್ತಾ) ಪುರಸಭೆಯ ಸರಹದ್ದನ್ನು ತಲುಪುವುದು. ಅಲ್ಲಿಂದ ಬಲಕ್ಕೆ ತಿರುಗಿ ಉತ್ತರಾಭಿಮುಖವಾಗಿ ಪುರಸಭೆಯ ಸರಹದ್ದಿನಲ್ಲೇ ಚಲಿಸುತ್ತಾ ಸ.ನಂ 163ನ್ನು ತಲುಪುವುದು.(ಸ.ನಂ.163ನ್ನು ಹೊರತುಪಡಿಸಿ)ಅಲ್ಲಿಂದ ಬಲಕ್ಕೆ ತಿರುಗಿ ಪೂರ್ವಾಭಿಮುಖವಾಗಿ ಚಲಿಸುತ್ತಾ ಸ.ನಂ 162ನ್ನು ಛೇದಿಸಿಕೊಂಡು ಹಾಗೂ ಸ.ನಂ 175ರ ದಕ್ಷಿಣ ಭಾಗದ ಗಡಿ ಅಂಚಿನಲ್ಲಿ ಸಾಗಿ ಸ.ನಂ 176ರ ಕೆರೆಯ ದಕ್ಷಿಣಭಾಗದ ಗಡಿಯನ್ನು ಬಂದು ಸೆರುವುದು.
23	ವಾರ್ಡ್ ನಂ 23	**ಪೂರ್ವಕ್ಕೆ:**	ದಂಡಾವತಿ ಹೊಳೆ	ಸೊರಬ–ಸಾಗರ ಮುಖ್ಯರಸ್ತೆಯ ಸ.ನಂ 101ರ ಉತ್ತರ ಗಡಿಅಂಚಿನಲ್ಲಿ ಪೂರ್ವಾಭಿಮುಖವಾಗಿ ಸಾಗುತ್ತಾ, ಹೊಳೆಯ ದಂಡೆಯನ್ನು ತಲುಪುವುದು. ಅಲ್ಲಿಂದ ಬಲಕ್ಕೆ ತಿರುಗಿ, ಹೊಳೆಯ ದಂಡೆಯ ಅಂಚಿನಲ್ಲೇ ದಕ್ಷಿಣಾಭಿಮುಖವಾಗಿ ಚಲಿಸುತ್ತಾ (ನಡಹಳ್ಳಿ ಗ್ರಾಮದ ಸ.ನಂ 31ರ ಗಡಿಅಂಚಿನವರೆಗೆ) ಪುರಸಭೆಯ ಸರಹದ್ದನ್ನು ತಲುಪುವುದು. ಹಾಗೆಯೇ ಪುರಸಭೆಯ ಸರಹದ್ದಿನಲ್ಲಿ ಚಲಿಸುತ್ತಾ (ಸ.ನಂ.31, 32, 49, 50, 51, 52, 53, 57, 82, 83, 84, 85, 86ಗಳನ್ನು ಒಳಗೊಂಡು) ಸ.ನಂ 86ರ ಉತ್ತರ ಗಡಿಯನ್ನು ಬಂದು ತಲುಪುವುದು. ಅಲ್ಲಿಂದ ಬಲಕ್ಕೆ ತಿರುಗಿ ಪೂರ್ವಾಭಿಮುಖವಾಗಿ ಚಲಿಸುತ್ತಾ ಸಾಗರ ರಸ್ತೆಯನ್ನು ತಲುಪುವುದು(ಪ್ರಾರಂಭ ಬಿಂದು)
		ಪಶ್ಚಿಮಕ್ಕೆ:	ಪುರಸಭೆ ಸರಹದ್ದು	
		ಉತ್ತರಕ್ಕೆ:	ವಾರ್ಡ್ ನಂ 22ರ ಗಡಿ	
		ದಕ್ಷಿಣಕ್ಕೆ:	ಪುರಸಭೆ ಸರಹದ್ದು	

PR-386

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ಕರ್ನಾಟಕ ಸರ್ಕಾರ

ಮುದ್ರಣ ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರ ಕಾರ್ಯಾಲಯ

ಸರ್ಕಾರಿ ಲೇಖನ ಸಾಮಗ್ರಿ ಮಳಿಗೆ ಮೈಸೂರು ರಸ್ತೆ ಬೆಂಗಳೂರು–560059

ಅಧಿಸೂಚನೆ

No. GSDB 15 STR (A) 2021-22/214 **Date :11-03-2022.**

ಮುದ್ರಣ ಲೇಖನ ಸಾಮಗ್ರಿ ಪ್ರಕಟಣೆ ಇಲಾಖೆಯ ಕೇಂದ್ರ ಲೇಖನ ಸಾಮಗ್ರಿ ಮಳಿಗೆ ಬೆಂಗಳೂರು ಹಾಗೂ ಅಧೀನ ಕಛೇರಿಗಳಾದ ಸರ್ಕಾರಿ ವಿಭಾಗೀಯ ಮುದ್ರಣಾಲಯ ಮೈಸೂರು, ಧಾರವಾಡ, ಕಲಬುರಗಿ ಕಛೇರಿಯ ಲೇಖನ ಸಾಮಗ್ರಿ ಮಳಿಗೆಗಳಲ್ಲಿ 2021–22ನೇ ಸಾಲಿನ ವಾರ್ಷಿಕ ದಾಸ್ತಾನು ಪರಿಶೀಲನೆಯ ಪ್ರಯುಕ್ತ ದಿನಾಂಕ:–04–04–2022 ರಿಂದ 08–04–2022ರ ವರೆಗೆ ಎಲ್ಲಾ ಸರ್ಕಾರಿ ಹಾಗೂ ಅರೆ ಸರ್ಕಾರಿ ಕಛೇರಿಗಳಿಗೆ ಲೇಖನ ಸಾಮಗ್ರಿಗಳು ಹಾಗೂ ಕಾಗದಗಳ ವಿತರಣೆಯನ್ನು ನಿಲ್ಲಿಸಲಾಗುತ್ತಿದೆ ಎಂಬ ವಿಷಯವನ್ನು ಸಂಬಂಧಿಸಿದ ಎಲ್ಲಾ ಸರ್ಕಾರಿ ಹಾಗೂ ಅರೆ ಸರ್ಕಾರಿ ಕಛೇರಿಗಳಿಗೆ ಈ ಮೂಲಕ ತಿಳಿಸಲಾಗಿದೆ.

ಸಹಿ/–
(ಎನ್ ಲಕ್ಷ್ಮೀನಾರಾಯಣ)
ನಿರ್ದೇಶಕರು

GOVERNMENT OF KARNATAKA

OFFICE OF THE DIRECTOR OF PRINTING STATIONERY AND PUBLICATION
GOVERNMENT STATIONERY DEPOT MYSORE ROAD BANGALORE-560059

NOTIFICATION

No. GSDB 15 STR (A) 2021-22/214 **Date :11-03-2022.**

It is hereby notified for the information of all the Government and Semi Government Offices that there will be no issue of stationery articles and papers from the Government Stationery Depot Bangalore, Mysore, Kalaburagi, and Dharwad from 04.04.2022 to 08.04.2022 (Both day inclusive) on account of Annual Stock Verification for the Year of 2021-22.

Sd/-
(N. Lakshminarayana)
Director

PR-387

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು.

SUNIL GARDE